సంక్రమణ

ಸಂಕ್ರಮಣ–೬೪ ರ ಬರಹಗಾರರು

ಮು. ಶಿವನಂಜಯ್ಯ
ಸಂಶೋಧನ ವಿದ್ಯಾರ್ಥಿ, ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ೯ನೇ ಕ್ರಾಸ್
ವಿ. ವಿ. ಮೊಹಲ್ಲ, ಮೈಸೂರು–೨

ಎಂ. ಜಿ. ಈಶ್ವರ್
ಕನ್ನಡ ಪ್ರಾಧ್ಯಾಪಕರು, ೯೧೬/೨, ಪಿ. ಜೆ. ಬಡಾವಣೆ, ದಾವಣಗೆರೆ–೪

ಎಂ. ಎನ್. ಜೈಪ್ರಕಾಶ್
ರಥಬೀದಿ, ಮರಗಂತ್ತಿ ಮಾರ್ಗ, ತೀರ್ಥಹಳ್ಳಿ

ಜಿರನಹಳ್ಳಿ ಸಿದ್ದಪ್ಪ
ಅಸಿಟೇಟ ನಗರ, ಮಂಡ್ಯ–೪

ಚಂದ್ರಶೇಖರ ತಾಳ್ಯ
ತತ್ವಶಾಸ್ತ್ರ ವಿಭಾಗ, ಮಾನಸಗಂಗೋತ್ರಿ, ಮೈಸೂರು–೬

ದೇವೇಂದ್ರ ದೇಸಾಯಿ
ಭಾಷಾಶಾಸ್ತ್ರ ವಿದ್ಯಾರ್ಥಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೩

ಬಸವರಾಜ ಮಲಶೆಟ್ಟಿ
ಕನ್ನಡ ಅಧ್ಯಾಪಕರು, ವಿಜಯನಗರ ಕಾಲೇಜು, ಹೊಸಪೇಟೆ

ಪ್ರಭಾವತಿ ಎಸ್. ವ್ಹಿ.
ನಂ. ೭೪೭, ಮಹಡಿ ಮನೆ, ೨ನೇ ಕ್ರಾಸ್, ವೈಯಾಳಿಕಾವಲ್, ಬೆಂಗಳೂರು–

ಶಂಕರ ಪಾಟೀಲ
ನಯನ ಸ್ಟುಡಿಯೊ, ದಾವಣಗೆರೆ–೨

ರಾಲ್ಫ್ ಗಮಿ
ಕೇರಾಫ್ ವಿ. ವಿ. ದೀಕ್ಷಿತ, ೧೫೩, ಹಾಸ್ಟೆಲ್ ೨, ಆಯ್. ಆಯ್. ಟಿ.
ಮುಂಬೈ–೭

ವಿಜಯ ಪಾಟೀಲ
ತೃತೀಯ ಬಿ. ಎಸ್. ಸಿ. (ಕೃಷಿ), ಕೃಷಿ ಮಹಾವಿದ್ಯಾಲಯ, ಧಾರವಾಡ–

ಹಳಪೇಟೆ ಚಿಂತಾಮಣಿ
ವಿದ್ಯಾಗಿರಿ, ಧಾರವಾಡ–೪

ಶಶಿಧರ ಕುಲಕರ್ಣಿ
೧೦೬೩/೧೧೦, ೧ನೇ ಮೇನ್, ೭ನೇ ಕ್ರಾಸ್, ವಿದ್ಯಾರಣ್ಯಪುರಂ,
ಮೈಸೂರು–೮

ಮ. ಶಿವನಂಜಯ್ಯ

ಗಿರಿಯವರ "ಗತಿ, ಸ್ಥಿತಿ"

ವಿಮರ್ಶೆ

'ಗತಿ, ಸ್ಥಿತಿ'ಯ ಬಗ್ಗೆ ಈಗಾಗಲೇ ನಾಲ್ಕಾರು ವಿಮರ್ಶೆಗಳು ಬಂದಿವೆ.[೧] ಅವುಗಳಲ್ಲಿ ಅನಂತಮೂರ್ತಿಯವರ ಪರಿಚಯಾತ್ಮಕ ಪ್ರಶಂಸಾತ್ಮಕ ಲೇಖನವೊಂದನ್ನುಳಿದರೆ ಉಳಿದವು ಕಾದಂಬರಿಯ ಒಂದೊಂದು ಅಂಶವನ್ನು ಕುರಿತ ಸೈದ್ಧಾಂತಿಕ ಪ್ರಕ್ರಿಯೆಯೋ ಪ್ರತಿಕ್ರಿಯೆಯೋ ಆಗಿವೆ. ಕಾದಂಬರಿಯನ್ನು ಗಂಭೀರವಾಗಿ ಪ್ರಾಯೋಗಿಕವಾಗಿ ವಿಶ್ಲೇಷಿಸುವ ಗೋಜಿಗೆ ಹೋದಂತೆ ಕಂಡುಬರುವುದಿಲ್ಲ. ಕಾದಂಬರಿಯ ಒಟ್ಟು ಪರಿಣಾಮಕ್ಕೆ ಪ್ರೇರಕವಾದ ಅಂಶಗಳನ್ನು ಗಮನಿಸಿ ವಿಶ್ಲೇಷಿಸಬೇಕಾದ ಅವಶ್ಯಕತೆಯನ್ನು ಯಾರೂ ಪೂರೈಸಿದಂತೆ ನನಗೆ ಅನಿಸಿಲ್ಲ. ಕಾದಂಬರಿಯಲ್ಲಿ ಬರುವ ಕೆಲವು ಸಂಕೇತಸಮುದಾಯವನ್ನು ಅನಂತಮೂರ್ತಿಯವರು ಪ್ರಾರಂಭದ ಕುತೂಹಲಕರ ನೋಟದಿಂದ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಉಳಿದವರು ವಿಮರ್ಶೆಯ ಒಂದೊಂದು ಸೂತ್ರಗಳನ್ನು ಮಾತ್ರ ಹಿಡಿದು ಜಗ್ಗಾಡಿದಂತೆ ಕಂಡುಬರುತ್ತದೆ. ನಾನು

೧ ಈಚಿನ ಸಾಹಿತ್ಯದ ಬಗ್ಗೆ ಸಾಕ್ಷಿ ೧೩. ಡಾ. ಯು. ಆರ್ ಅನಂತಮೂರ್ತಿ
ಜಿ. ಎಸ್. ರಂಗನಾಥರಾವ್– ಸಂಕ್ರಮಣ ೪೯
ಗತಿ, ಸ್ಥಿತಿ– (ಒಂದು ವಿಮರ್ಶೆ)– ಜಾ. ಗೋ. ಸಾಕ್ಷಿ ೧೭
ಗತಿ, ಸ್ಥಿತಿ : ಮರುಚಿಂತನೆ– ಜಿ. ಎಸ್. ರಂಗನಾಥರಾವ್ ಸಾಕ್ಷಿ, ೧೮
ಗತಿ, ಸ್ಥಿತಿ– ವಿಮರ್ಶೆಯ ಬಗ್ಗೆ ಒಂದು ಪ್ರತಿಕ್ರಿಯೆ– ಡಿ. ರಘುನಾಥರಾವ್ ಸಾಕ್ಷಿ ೧೯
ಗತಿ, ಸ್ಥಿತಿ– ಒಂದು ವಿಮರ್ಶೆ– ಐದು ಅನುಮಾನಗಳು: ಅವಧಾನಿ. ಜಿ. ಎಸ್. ಸಾಕ್ಷಿ ೧೯
ಗಿರಿಯವರ 'ಗತಿ, ಸ್ಥಿತಿ' : ವಿಮರ್ಶೆಗೆ ಒಂದು ಸೂಚನೆ : ಕಿತ್ತೂರ ರಾಮಚಂದ್ರ ಸಾಕ್ಷಿ ೧೯

ಈ ಪುಟ್ಟ ಪ್ರಬಂಧದಲ್ಲಿ ನನಗೇ ಅರ್ಥವಾಗದ ಕೆಲವು ಸಂದೇಹಗಳ ಬಗೆ ನನಗೆ ಅನಿಸುವ, ಜೊತೆಗೆ ಹಿಂದಿನ ವಿರ್ಮಶಕರ ಕೆಲವು ಅಭಿಪ್ರಾಯಗಳನ್ನು ಒಪ್ಪಿಕೊಂಡ, ಕೆಲವೊಮ್ಮೆ ಹಿಂದಿನ ವಿಮರ್ಶಕರಿಗೆ ಪ್ರತಿಕ್ರಿಯೆಯಾಗ ಬಹುದಾದ ಸಾಧ್ಯತೆಗಳ ನಡುವೆ ಈ ಕಾದಂಬರಿಯನ್ನು ವಿಶ್ಲೇಷಿಸಿದ್ದೇನೆ.

ಈ ಕಾದಂಬರಿಯ ಒಟ್ಟು ಧೋರಣೆಯೇನು ಎಂಬುದನ್ನು ಮೊದಲು ಪರಿಶೀಲಿಸಬಹುದು. " "ಗತಿ,ಸ್ಥಿತಿ" ಪಾತ್ರ ಪ್ರಧಾನವಾದ ಕಾದಂಬರಿಯಲ್ಲ. "ಗತಿ, ಸ್ಥಿತಿ" ವ್ಯಕ್ತಿತ್ವಪ್ರಧಾನವಾದ ಕಾದಂಬರಿ"೧. ಎಂಬುದನ್ನು ಸೀಮಿತಾರ್ಥದಲ್ಲಿ ಒಪ್ಪಿಕೊಂಡರೆ, ಜೊತೆಗೆ ಕಾದಂಬರಿಯ ಎಲ್ಲ ಸನ್ನಿವೇಶಗಳೂ ಎಲ್ಲ ಪಾತ್ರಗಳೂ 'ಆತ'ನ ದೃಷ್ಟಿಯಿಂದಲೇ ನೋಡಲ್ಪಡುವುದರಿಂದ 'ಆತ'ನ ಧೋರಣೆಯೇ ಇಡೀ ಕಾದಂಬರಿ ಧ್ವನಿಸುವ ಧೋರಣೆಯೂ ಆಗಿರುತ್ತದೆ. ಈ ಕಾದಂಬರಿಯಲ್ಲಿ 'ಆತ' ಪ್ರಮುಖನಾಗುತ್ತಾನೆಯೇ ಹೊರತು ಇನ್ನುಳಿದ ಪಾತ್ರಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲದಿರುವುದರಿಂದ ಅವು ಆತನ ಧೋರಣೆಗೆ ವ್ಯಂಜಕಗಳಾಗಿ ಮಾತ್ರ ಬರುತ್ತವೆ. ಆದ್ದರಿಂದ "'ಆತ' ಕಾದಂಬರಿಯ ಕೇಂದ್ರದಲ್ಲಿದ್ದಾನೆ– ನಿಜ. 'ಆತನೇ' ಕೇಂದ್ರವಸ್ತುವಲ್ಲ".೨ ಎಂಬುದನ್ನು ಒಪ್ಪುವುದು ಕಷ್ಟವಾಗುತ್ತದೆ. ಮೈಸೂರು, ಬೆಂಗಳೂರು ಹಾಗೂ ಹೊಸ ನಗರ (ನಮ್ಮ ಮಾತಿನಲ್ಲಿ ಹೇಳುವುದಾದರೆ ಬಿಸಿಲುಪುರ) ಇವುಗಳು 'ಆತ'ನ ಸಂವೇದನೆಗಳ ಕಾರ್ಯಕ್ಷೇತ್ರ ಹಾಗೂ ಪ್ರಚೋದಕ ಶಕ್ತಿಗಳಾಗುತ್ತವೆಂಬುದು ನಿಜ. ಆದರೆ ಆತನ ಸಂವೇದನೆ ನಮಗೆ ಮುಖ್ಯವೇ ಹೊರತು ಅದಕ್ಕೆ ಮೂಲವಾಗುವ ಯಾವುದೇ ಊರುಗಳಲ್ಲಿ ಹೀಗೆ ಗತಿ, ಸ್ಥಿತಿ "ವ್ಯಕ್ತಿತ್ವ ಪ್ರಧಾನ"ವಾದ ಕಾದಂಬರಿಯಾಗುತ್ತದೆ. ಈ ವ್ಯಕ್ತಿತ್ವ ಪ್ರಧಾನತೆ ಕಾದಂಬರಿಯಲ್ಲಿ ಸುವ್ಯಕ್ತವಾಗುತ್ತದೆಯೇ ಎಂಬುದನ್ನು ಮುಂದೆ ವಿಮರ್ಶಿಸಲಾಗುತ್ತದೆ.

ಕಾದಂಬರಿಯ ಧೋರಣೆಯ ದೃಷ್ಟಿಯಿಂದ ಅದು ಕಾದಂಬರಿಯ ತಂತ್ರದ ಮೇಲೆ ಬೀರಬಹುದಾದ ಪ್ರಭಾವದಿಂದ ಮೇಲೆ ಇಷ್ಟೆಲ್ಲವನ್ನೂ ಹೇಳಲಾಯಿತು.

---

೧ ಜಿ. ಎನ್. ರಂಗನಾಥರಾವ್ ಸಾಕ್ಷಿ. ೧೮ ಪು. ೯೦

೨ ಡಿ. ರಘುನಾಥರಾವ್– ಸಾಕ್ಷಿ. ೧೯. ಪು. ೯೫

ಕಾದಂಬರಿಯ ವಸ್ತು ಹಾಗೂ ಕಾದಂಬರಿಯ ತಂತ್ರ ಅವಿನಾ ಆಗಬೇಕಾದರೆ ಕಾದಂಬರಿಯಲ್ಲಿ ಬರುವ ನಿರೂಪಣೆ ವಿವರಣೆಗಳು ಪ್ರಾತಿನಿಧಿಕವಾಗಿ ಅಭಿವ್ಯಕ್ತಗೊಳ್ಳಬೇಕಾಗುತ್ತದೆ. ಅಂದರೆ ಗತಿ, ಸ್ಥಿತಿಯ ನಿರೂಪಣೆ (Narration) ಕಾದಂಬರಿಯ ಧೋರಣೆಯ ಪ್ರಮುಖ ಪ್ರತಿನಿಧಿಯಾದ 'ಆತ'ನ ಮುಖಾಂತರವೇ ಆಗಬೇಕಿತ್ತು. ಕಾದಂಬರಿಯ ಎಲ್ಲ ವಿವರಗಳನ್ನು 'ಆತ'ನ ಮೂಲಕವೇ ಕಾಣುವ ಕಾದಂಬರಿಕಾರರು ಉತ್ತಮ ಪುರುಷದಲ್ಲಿ ನಿರೂಪಿಸಲ್ಪಡಬಹುದಿದ್ದ ಕಾದಂಬರಿಯನ್ನು ಪ್ರಥಮಪುರುಷದಲ್ಲಿ ಹೇಳಿ ತಾಂತ್ರಿಕ ತೊಡಕಿಗೆ ಸಿಕ್ಕಿ ಹಾಕಿಕೊಂಡಿದ್ದಾರೆಂದು ಅನಿಸುತ್ತದೆ. ಈ ಬಿರುಕು ಕಾದಂಬರಿಯುದ್ದಕ್ಕೂ ಸ್ಪಷ್ಟವಾಗಿ ಗೋಚರವಾಗುತ್ತದೆ.

ಕಾದಂಬರಿಯೊಂದರಲ್ಲಿ ಹಲವು ಪಾತ್ರಗಳನ್ನು ಬಿಚ್ಚಿಡಲು ಪ್ರಥಮಪುರುಷದಲ್ಲಿ ಹೇಳಲ್ಪಡುವುದು ಹಳೆಯ ಜನಪ್ರಿಯ ತಂತ್ರ. ಇದರಲ್ಲಿ ಕಾದಂಬರಿಯ ಒಟ್ಟು ಧೋರಣೆಯನ್ನು ಗುರುತಿಸುವುದು ಅಷ್ಟು ಸುಲಭದ ಕೆಲಸವಲ್ಲ. ಅಲ್ಲಿನ ಪ್ರಮುಖ ಸನ್ನಿವೇಶಗಳು ಹಾಗೂ ಕಾದಂಬರಿಯ ಒಟ್ಟು ಪಾತ್ರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಧರಿಸಬೇಕಾಗುತ್ತದೆ. ಇದರಿಂದ ಕಾದಂಬರಿಯ ಕಾರ್ಯಕ್ಷೇತ್ರ ವಿಶಾಲವಾಗುವುದಲ್ಲದೆ ಪ್ರತಿಯೊಂದು ಪಾತ್ರಗಳಿಗೂ ಸ್ವತಂತ್ರ ಅಸ್ತಿತ್ವ ಆಲೋಚನೆಗಳು ಪ್ರಾಪ್ತಿಸುತ್ತವೆ.

ಉತ್ತಮ ಪುರುಷದಲ್ಲಿ ಕಥೆ ಹೇಳುವುದು ಈಗಿನ ಹೆಚ್ಚು ಜನಪ್ರಿಯ ತಂತ್ರ. ಇದರಲ್ಲಿ ಕಾದಂಬರಿಯ ಕೇಂದ್ರಬಿಂದುವಾದ ನಾಯಕನ ಪ್ರಜ್ಞೆಯ ಮುಖಾಂತರವೇ ಸುತ್ತಣ ಸನ್ನಿವೇಶ ಪಾತ್ರಗಳು ಅಭಿವ್ಯಕ್ತಗೊಳ್ಳುತ್ತವೆ. ಇದಕ್ಕೆ ಹೊರತಾದುದನ್ನು ನಾವು ಏನನ್ನೂ ಕಾದಂಬರಿಯಲ್ಲಿ ನಿರೀಕ್ಷಿಸುವಂತಿಲ್ಲ. ಆದ್ದರಿಂದ ಇವೆರಡು ತಂತ್ರಗಳಿಗೂ ತಮ್ಮದೇ ಆದ ಇತಿಮಿತಿಗಳಿವೆ.

ಕಾದಂಬರಿಯಲ್ಲಿ ಬರುವ ಈ ತಾಂತ್ರಿಕ ತೊಡಕು ವಿವರಗಳ ಮೇಲೆ ಸೂಕ್ಷ್ಮವಾಗಿ ಪ್ರಭಾವ ಬೀರದೇ ಇಲ್ಲದಿಲ್ಲ. ಅನಂತಮೂರ್ತಿಯವರು ಗುರುತಿಸಿ

ದಂತೆ[1] ಸ್ಪಷ್ಟವಾಗಿ ಎದ್ದು ಕಾಣುವ 'ಕಾಲೇಜಿನ ಗುಮಾಸ್ತನೊಬ್ಬ ಕಾಗದ ಪತ್ರಗಳನ್ನು ಗೊಬ್ಬರದ ಗುಂಡಿಯನ್ನಾಗಿಸುವ ಚಿತ್ರ'[2] ಅನವಶ್ಯಕವಾಗುತ್ತದೆ. ಕಾದಂಬರಿಯ ನಿರೂಪಣಾದೃಷ್ಟಿಯಿಂದ ಲೇಖಕರು ವರ್ಣಿಸಿದಂತೆ ಕಾಣುವು ದರಿಂದ ಸಮರ್ಥನೀಯವೂ ಆಗುತ್ತದೆ. ಇನ್ನೂ ಸೂಕ್ಷ್ಮವಾಗಿ ಈ ಅಂಶ ವ್ಯಕ್ತವಾಗುವುದು ಕಾದಂಬರಿಯಲ್ಲಿ ಬೀಡಾದವನ ದೀರ್ಘವರ್ಣನೆಯಲ್ಲಿ.[3] ಇದು ಕನಸಾದರೂ 'ಬಿಸಿಲುಪುರ'ದಿಂದ ದೂರ ಹೋಗಬೇಕೆನ್ನುವ ವಿಕ್ಷಿಪ್ತ ಮನಸ್ಥಿತಿಯ ತೀವ್ರ ಸಂವೇದನೆಯ ಜೊತೆಗೆ ಕ್ರಿಯಾಶೀಲವೂ ಆದ ಅವರಿಬ್ಬರ ಪಲಾಯನ ಸ್ಥಿತಿಯಲ್ಲಿಯೇ ಬೀಡಾದವನ ನಿಷ್ಕ್ರಿಯವೂ ನಿರ್ಲಿಪ್ತವೂ ಜಡವೂ ಪ್ರತಿಕ್ರಿಯಾರಹಿತವೂ ಆದ ಸ್ಥಿತಿಯ ದೀರ್ಘವರ್ಣನೆ ಒಂದಕ್ಕೊಂದು ತದ್ವಿರುದ್ಧವಾಗಿ ಪರಿಣಮಿಸುತ್ತವೆ. ಈ ವರ್ಣನೆ ತನಗೆ ತಾನೇ ಚೆನ್ನಾಗಿದ್ದರೂ ಕಾದಂಬರಿಯು ಉಂಟುಮಾಡಬಹುದಾದ ತೀವ್ರ ಪರಿಣಾಮಕ್ಕೆ ವಿಸಂಗತ ವಲ್ಲದಿದ್ದರೂ ನಾನು ಮೇಲೆ ಸೂಚಿಸಿದ ತೊಡಕಿಗೆ ಸೂಕ್ಷ್ಮವಾಗಿ ಈಡಾಗು ತ್ತದೆ. ಈ ಪ್ರಸಂಗವೂ ಸಹಾ ಕಾದಂಬರಿಯ ಪ್ರಸಕ್ತತಂತ್ರದ ಮೂಲಕ ಸಮರ್ಥನೀಯವಾದರೂ 'ಆತ'ನ ಧೋರಣೆಯ ಮುಖಾಂತರ ಕಾಣಬಹು- ದಾದರೆ ಅವನ ಅಂದಿನ ವಿಶಿಷ್ಟ ಮನಸ್ಥಿತಿಯಲ್ಲಿ ಅಸಹಜವೂ ಅಸಂಗತವೂ ಆಗುತ್ತದೆ.

ಈ ಪ್ರಶ್ನೆ ಕಾದಂಬರಿಯ ಇತರ ಅಂಶಗಳತ್ತ ಗಮನವನ್ನು ಹೊರಳಿಸುತ್ತದೆ. ಕಾದಂಬರಿಯಲ್ಲಿ ವೈಚಾರಿಕತೆಯ ಸ್ವರೂಪವೇನು, ಎಂಬುದನ್ನು ಪರಿಶೀಲಿಸು ವಾಗ, ಒಂದು ಕಾದಂಬರಿಗಳಲ್ಲಿ ಬರುವ ಪಾತ್ರಗಳ ಸ್ವಭಾವ ಹಾಗೂ ಅವರ ಬೌದ್ಧಿಕತೆಯ ಮಟ್ಟ, ವಯಸ್ಸು, ಪರಿಸರ ಮುಂತಾದುವನ್ನು ಗಮನಿಸ ಬೇಕಾಗುತ್ತದೆ. ಹಾಗೆ ಗಮನಿಸಿದರೆ ಒಂದೊಂದು ಪಾತ್ರದ ಮೂಲಕ ವ್ಯಕ್ತ ವಾಗಬಹುದಾದ ವೈಚಾರಿಕತೆ, ಹಾಗೂ ಬೌದ್ಧಿಕವಾಗಿ ಹಿಂದುಳಿದ, ಪ್ರಾದೇಶಿಕ ಹಿನ್ನೆಲೆಯುಳ್ಳ ಕಥೆ ಕಾದಂಬರಿಗಳ ಮೂಲಕ ಅಭಿವ್ಯಕ್ತವಾಗಬೇಕಾದ ವೈಚಾರಿ

---

೧ ಸಾಕ್ಷಿ ೧೩. ಪು. ೧೧೬.

೨ ಗತಿ, ಸ್ಥಿತಿ. ಪು. ೧೯–೨೦.

೩ ಗತಿ,ಸ್ಥಿತಿ. ಪು. ೭೯–೮೧,

ಕತೆ ಇವೆರಡರಲ್ಲಿ ಗಮನಾರ್ಹ ಅಂತರವಿರುವುದನ್ನು ಗುರುತಿಸಬೇಕಾಗುತ್ತದೆ. ಹೀಗಾಗಿ ಕನ್ನಡದ ಕೆಲವು ಕಾದಂಬರಿಗಳಲ್ಲಿಯೂ ಹಾಗೂ ಕಥೆಗಳಲ್ಲಿಯು ಪಾತ್ರಗಳು ತಮ್ಮ ಸ್ವಭಾವದೂರವಾದ ವೈಚಾರಿಕತೆಯಿಂದ ನರಳುವುದನ್ನು ಕಾಣಬಹುದು.[೧] ಇದನ್ನು ಪರಿಹರಿಸಲು ಕೆಲವರು ಗ್ರಾಮಸಮಾಜದ ಮಟ್ಟದಲ್ಲಿ ವೈಚಾರಿಕಮಟ್ಟದಲ್ಲಿ ಹೋರಾಡುವ ಪಾತ್ರಗಳನ್ನು ತಂದು ಕಾದಂಬರಿಗಳಲ್ಲಿನ ಬೌದ್ಧಿಕ ಅಂಶವನ್ನು ಪ್ರಖರಪಡಿಸುವುದನ್ನೂ ಗುರುತಿಸಬಹುದು.[೨] ಈ ಅಂಶ ಸಮಸ್ಯೆಯನ್ನು ಬೇರೊಂದು ಮುಖದತ್ತ ಎಳೆಯುವದರಿಂದ ಸಧ್ಯದ ವಿಷಯಕ್ಕೆ ಅಪ್ರಸ್ತುತವಾಗುವುದರಿಂದ ನಿಲ್ಲಿಸಬಹುದು.

ಮೇಲೆ ವಿವೇಚಿಸಿರುವಂತೆ ಕಾದಂಬರಿಯ ಒಟ್ಟು ಪರಿಣಾಮದ ದೃಷ್ಟಿಯಿಂದ ಸಂವಹನದಲ್ಲಿ ಕೆಲವು ತೊಡಕುಗಳಿದ್ದರೂ, ಇಡೀ ಕಾದಂಬರಿ 'ಆತ'ನ ಮುಖಾಂತರವೇ ವ್ಯಕ್ತವಾಗುವುದರಿಂದ 'ಆತ'ನ ಧೋರಣೆಯೇ ಇಡೀ ಕಾದಂಬರಿಯನ್ನು ಪ್ರತಿನಿಧಿಸುತ್ತದೆ. ಕಾದಂಬರಿಯಲ್ಲಿ ಅಭಿವ್ಯಕ್ತವಾಗುವ 'ಆತ'ನ ಅನುಭವದ ಸ್ವರೂಪ ಮತ್ತು ಅದಕ್ಕೆ ಅವನು ತೋರಿಸುವ ತೀವ್ರ ಪ್ರತಿಕ್ರಿಯೆ, ತನ್ಮೂಲಕ 'ಆತ'ನ ವ್ಯಕ್ತಿತ್ವವನ್ನು ನಾವು ಕಾಣಬೇಕಾಗುತ್ತದೆ. ಈ ರೀತಿಯ ತಾಂತ್ರಿಕ ಪ್ರಭಾವವನ್ನು ಇಂದಿನ ಬಹುಪಾಲು ನವ್ಯ ಲೇಖಕರು ಪಡೆದಿರುವಂತೆ ಗಿರಿಯವರೂ ಕಮೂ ಕಾಫ್ಕರವರಿಂದ ಪಡೆದಿದ್ದಾರೆ. ಕಾದಂಬರಿಯ ಒಟ್ಟು ಧೋರಣೆಯಲ್ಲಿಯೂ ಅಸ್ತಿತ್ವವಾದದ ಪ್ರಭಾವ ಇದೆ. 'ಆತ'ನ ಧೋರಣೆಯನ್ನು ಜಿ. ಎನ್. ರಂಗನಾಥರಾಯರು ಗುರುತಿಸಿರುವುದು "establishment ಗೆ ವಿಮುಖವಾದ ಧೋರಣೆಯನ್ನು. ತನ್ನವಳಾದ ಹುಡುಗಿಯಿಂದ ಹಿಡಿದು ಊರು, ಸಮಾಜ, ಅಂಗೀಕೃತ ವ್ಯವಸ್ಥೆ ಮತ್ತು

---

೧ ಉದಾಹರಣೆಗೆ ಶ್ರೀಕೃಷ್ಣ ಆಲನಹಳ್ಳಿ ಅವರ 'ಕಾಡು' ಕಾದಂಬರಿಯ ಕಿಟ್ಟಿ. ಡಾ. ಯು. ಆರ್. ಅನಂತಮೂರ್ತಿಯವರ ಕಥೆಗಳಲ್ಲಿನ ಬ್ರಾಹ್ಮಣರಾದರೂ ಬೌದ್ಧಿಕವಾಗಿ ಕೆಳಸ್ತರದ ಪಾತ್ರಗಳು ಇತ್ಯಾದಿ.

೨ ಉದಾಹರಣೆಗೆ ಸಂಸ್ಕಾರದ ಪ್ರಾಣೇಶಾಚಾರ್ಯ ಕಾಶಿಯಿಂದ ಹಿಂದಿರುಗಿದವನು; ಭಾರತೀಪುರದ ಜಗನ್ನಾಥ ಪಾಶ್ಚಾತ್ಯಪ್ರಜ್ಞೆಯ ಪ್ರತೀಕವಾಗಿ ಲಂಡನ್ನಿಗೆ ಹೋಗಿ ಬಂದವನು; ಕಾನೂರು ಹೆಗ್ಗಡಿತಿಯ ಹೂವಯ್ಯ ಮೈಸೂರಿನಿಂದ ಬಂದ ನಾಗರಿಕ ಪ್ರಜ್ಞೆಯ ಯುವಕ ಇತ್ಯಾದಿ.

"....ಏನಾದರಾಗಲಿ ಎಂದು ತಲೆಯನ್ನು ಹಿಂದಿನ ಕಲ್ಲಿಗೆ ಆನಿಸಿಕೊಂಡು ಕಣ್ಣನ್ನು ಮುಚ್ಚಿದಾಗ ಚಿಕ್ಕಂದಿನಿಂದ ಇದುವರೆಗಿನ ಹಲವಾರು ಸಂಗತಿಗಳು ಕಣ್ಮುಂದೆ ಮಿಂಚಿನಂತೆ ಮಿಂಚಿದವು. ಆ ಸಂಗತಿಗಳನ್ನು ಹಿಡಿದು ಭದ್ರಪಡಿಸಿ ಕೊಳ್ಳಲು, ಶಾಶ್ವತಗೊಳಿಸಿಕೊಳ್ಳಲು ತನ್ನ ಕೈಗಳು ಚಾಚಿದಂತೆ ಅನ್ನಿಸಿದವು. ಬದುಕಿನ ಸಾರಾಂಶ ಒಂದು ಕ್ಷಣದ ಹೊಳಪಿನಲ್ಲಿ ಮಿಂಚಲು ಸಾಧ್ಯವೆ....ಇದು ಬಹುಶಃ ದುರ್ಬಲ ಕ್ಷಣದ ಭ್ರಮೆ ಇರಬೇಕು."[೧] ಈ ಆತ್ಮನಿರೀಕ್ಷಣೆಯಲ್ಲಿಯೇ 'ಆತ'ನ ವ್ಯಕ್ತಿತ್ವ ಪ್ರಕಾಶನದ ಮಿತಿಯೂ ಇದೆ. ನಮಗೆ 'ಆತ' ಏಕೆ ಅಸ್ಪಷ್ಟವ್ಯಕ್ತಿಯಾಗಿಯೇ ಉಳಿಯುತ್ತಾನೆಂಬುದು ಕಾದಂಬರಿಯ ಉದ್ದಕ್ಕೂ ಅವನ ಪೂರ್ವಗ್ರಹಪೀಡಿತ ಮನೋಧರ್ಮದಿಂದ ವ್ಯಕ್ತವಾಗುತ್ತದೆ. ಜಗತ್ತಿನ ಎಲ್ಲ ವಿರೂಪ ಕುರೂಪಗಳು ಅವನನ್ನು ಕೆರಳಿಸಿ ರೊಚ್ಚಿಗೇಳಿಸಿದರೂ ತನ್ನಲ್ಲಿಯ ಯಾವುದೋ ಒಂದು ಅವಗುಣವೂ ಇದಕ್ಕೆ ಕಾರಣವಿರಬಹುದೆಂಬ 'ಸ್ವಗತ' ಪ್ರಜ್ಞೆ ಅವನಿಗೆ ಇರುವುದೇ ಇಲ್ಲ. ಹೀಗಾಗಿ 'ಆತ'ನ ಪೂರ್ಣಪರಿಚಯ ನಮಗಾಗದೇ, ಗಂಭೀರನಾಗದೆ, ಕೇವಲ ಅವನ ಅನಿಸಿಕೆಗಳು ಮನೋರೋಗಿ ಯೊಬ್ಬನ ಹುಚ್ಚಾಟಗಳಂತೆ ಕಂಡರೆ ಆಶ್ಚರ್ಯವಿಲ್ಲ. ಈ ಅರ್ಥದಲ್ಲಿಯೇ ಜಾಗೀರವರು "ಇಡೀ ಕಾದಂಬರಿ ಬರೀ ಬಂದು ಮನೋವೈಜ್ಞಾನಿಕ ವೇಧಶಾಲೆಯಾಗಿ ಪರಿಣಮಿಸಿದಂತಿದೆ"[೨] ಎಂದಿರುವುದು.

ಕಾದಂಬರಿಯ ಅಂತ್ಯ ಇಡೀ ಧೋರಣೆಯನ್ನು ಛಟ್ಟಿ ಇಳಿಸುತ್ತದೆ. "ಕೂಡಲೇ ಮಾಣಿ ಎರಡು ಗ್ಲಾಸುಗಳನ್ನು ಎತ್ತಿಕೊಂಡು ಹಾಲ್‌ನ ಆಚೆ ಮೂಲೆಯಲ್ಲಿದ್ದ ದೊಡ್ಡ ಪಾತ್ರೆಯೊಳಗೆ ಅವುಗಳನ್ನು ಅದ್ದಿ ನೀರುತುಂಬಿಕೊಂಡು ತನ್ನ ಕಡೆಗೇ ಬರುತ್ತಿರುವುದು ಕಾಣಿಸಿದರೂ ನೀರು ತನ್ನ ಬಾಯಿಗೆ ಬೀಳುವುದು ಇನ್ನು ಯಾವ ಕಾಲಕ್ಕೋ ಅನ್ನಿಸಿತು."[೩]

ಇಲ್ಲಿನ 'ತನ್ನ ಕಡೆಗೇ' ಎಂಬಲ್ಲಿನ ಅವಧಾರಣೆ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತದೆ. ಇಡೀ ಕಾದಂಬರಿ ಜೀವನಕ್ಕೆ ಜೀವಕ್ಕೆ ಮುಕ್ತಿಯಿಲ್ಲ

---

೧ ಗತಿಸ್ಥಿತಿ ಪು. ೧೩೪

೨ ಸಾಕ್ಷಿ ೧೭ ಪು. ೧೦೯

೩ ಗತಿಸ್ಥಿತಿ ಪು. ೧೩೪

ಎಂಬ ಆಧಾರಭೂತ ಧೋರಣೆಯಿಂದ ರೂಪಿತವಾಗಿರುವುದನ್ನು ಇಲ್ಲಿ ಕಾಣಬಹುದು. ಕಮೂವಿನ The Outsiderನ ಧೋರಣೆ ಹಾಗೂ ತಂತ್ರಗಳು ಇಂಥ ಕಡೆಗಳಲ್ಲಿ ಸ್ಪಷ್ಟವಾಗಿ ಕಂಡುಬರುತ್ತವೆ. ತಂತ್ರದ ದೃಷ್ಟಿಯಿಂದ The Outsiderನ ನಿರೂಪಣೆಯಲ್ಲಿನ ನಿರ್ಲಿಪ್ತತೆ ಕಂಡು ಬರದಿದ್ದರೂ ವಿವರಗಳ ಚಿತ್ರಣದಲ್ಲಿ ಹೆಚ್ಚು ಪ್ರಭಾವ ಬೀರಿದೆ. 'ಆತ'ನ ಈ ಆಧಾರಭೂತ ಧೋರಣೆಯು ಆಮ್ಲ ಯಾವಯಾವ ಮೂಲವಸ್ತು ಗಳೊಂದಿಗೆ ಹೇಗೆಹೇಗೆ ವರ್ತಿಸಿ ಯಾವಯಾವ ಸಂಯುಕ್ತ ವಸ್ತುಗಳನ್ನು ಉತ್ಪತ್ತಿ ಮಾಡುತ್ತದೆ ಎಂಬುದೇ ಈ ಕಾದಂಬರಿಯ ಸನ್ನಿವೇಶ ಹಾಗೂ ವಿವರಗಳು. ಆದ್ದರಿಂದ ಜಿ. ಎಸ್. ರಂಗನಾಥರಾವ್ ಹೇಳುವ "ಶುದ್ಧ ಜೀವನಾನುಭವವೇ ಇಲ್ಲಿನ ನಿರೂಪಣೆ"[೧] ಎಂಬ ಮಾತು ಸತ್ಯದೂರ. ಏಕೆಂದರೆ "ಅನುಭವದ ಸ್ವೀಕಾರ ಹಾಗೂ ಆಯ್ಕೆಗಳನ್ನು ಕೂಡ ಲೇಖಕರ ವೈಚಾರಿಕತೆಯೇ ನಿಯಂತ್ರಿಸುತ್ತದೆ ಆದ್ದರಿಂದ ಸಾಹಿತ್ಯದಲ್ಲಿ ಶುದ್ಧವಾದ ಜೀವನಾನುಭವ ಎಂಬುದು ಸಂದೇಹಾಸ್ಪದ"[೨] ಎಂಬ ಗಿರಡ್ಡಿ ಗೋವಿಂದ ರಾಜರ ಮಾತನ್ನು ಒಪ್ಪಿಕೊಂಡರೆ, ಒಂದು ವಿಶಿಷ್ಟ ಮನಸ್ಥಿತಿಯ ಮೂಲಕ ಅನುಭವಗಳನ್ನು ಕಾಣುವ ಗತಿ, ಸ್ಥಿತಿಯ 'ಆತ'ನ ಅನಿಸಿಕೆಗಳು "ಶುದ್ಧ ಜೀವ-ನಾನುಭವ"ವಾಗಲು ಸಾಧ್ಯವೇ ಇಲ್ಲ.

ಕಾದಂಬರಿಯ ಸನ್ನಿವೇಶಗಳು ವಿವರಗಳಲ್ಲಿ ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಕಥೆಯ ಅಂಶ ಕಡಿಮೆ. ಯು.ಆರ್. ಅನಂತಮೂರ್ತಿ ಹೇಳುವಂತೆ "ಕಾದಂಬರಿ ತನ್ನ ಅರ್ಥವನ್ನೆಲ್ಲಾ ವಿವರಗಳಲ್ಲಿ ಹುಟ್ಟಿಸಿಕೊಳ್ಳುತ್ತದೆ. ಒಂದು ದೃಷ್ಟಿ ಯಲ್ಲಿ ವಿವರಗಳೇ, ಈತ ವಿವರಗಳನ್ನು ಗಮನಿಸುವುದೇ, ಯಾಕೆ ಗಮನಿಸು ತ್ತಾನೆಂಬುದೇ ಕಾದಂಬರಿ."[೩] ಕಾದಂಬರಿಯಲ್ಲಿ ನಗರ ಜೀವನದ ಬಿಡಿಬಿಡಿ ವಿವರಗಳು ಅಚ್ಚರಿ ಹುಟ್ಟಿಸುವಷ್ಟರ ಮಟ್ಟಿಗೆ ಚಿತ್ರಿತವಾಗಿದೆ. ಜನರ ಸುಲಿಗೆ, ಗಲಾಟೆ, ಕಸ, ಸಿಧಾನ ದೋರಣೆ, ವಾಸಸ್ಥಳದ ಸಮಸ್ಯೆ, ಎಲ್ಲವೂ

---

೧ ಸಾಕ್ಷಿ ೧೮ ಪು, ೧೩

೨ ಗಿರಡ್ಡಿ ಗೋವಿಂದರಾಜ ಮನ್ವಂತರ ೨ ಪು. ೩೮.

೩ ಸಾಕ್ಷಿ ೧೨. ಪು. ೧೧೪.

ಕಣ್ಣ ಮುಂದೆ ಕಂಡಷ್ಟು ಅನುಭವವಾಗುತ್ತದೆ. ಇದು ಒಟ್ಟಿನಲ್ಲಿ ನ
ಜೀವನದ ಸಂಕೀರ್ಣ ಸ್ಥಿತಿಯನ್ನು ವರ್ಣಿಸುವ ಕಾದಂಬರಿ. ನಗರ ಜೀವನ
ಯಾಂತ್ರಿಕತೆಗೆ ಸಂವೇದನಾಶೀಲನಾದ ವ್ಯಕ್ತಿಯೊಬ್ಬನು ತೋರುವ ಪ್ರತಿಕ್ರಿ
ಗಳು ಇಲ್ಲಿಯ ಜೀವಾಳ. ಸಂಕೀರ್ಣ ಬದುಕನ್ನು ವಿವರಗಳು ತೋರುವಂ
ಬದುಕುವ 'ಆತ' ಸಂಕೀರ್ಣವಾಗಿ ತೋರುವುದಿಲ್ಲ. ಇದೇ ಈ ಕಾದಂಬರಿ
ಸೋಲು.

ಕಾದಂಬರಿಯ ಉದ್ದೇಶಿತ ಪರಿಣಾಮಕ್ಕೆ ವಿವರಗಳು ಹೇಗೆ ಅನಿವಾರ್ಯ
ವಾಗಿ ಸಂಗತವಾಗಿ ನಿಂತುಕೊಳ್ಳುತ್ತವೆಂಬುದನ್ನು ಕಾಣಬಹುದು. ವರ್ಣನೆಗಳ
ಒಂದೊಂದೂ ಸಾಂಕೇತಿಕ ಕ್ರಿಯೆಯನ್ನು ವ್ಯಂಜಿಸುತ್ತದೆ. ಈ ವ್ಯಂಜನ ಶಕ್ತಿ
ಹಾಗೂ ಅದಕ್ಕೆ ಅನುಗುಣವಾದ ಭಾಷೆಯ ಸಶಕ್ತ ಬಳಕೆ ಈ ಕಾದಂಬರಿಯನ್ನು
ಮೇಲ್ಮಟ್ಟಕ್ಕೆ ಒಯ್ದಿವೆ. ಕಾದಂಬರಿಯ ಒಂದೊಂದು ವಿವರವೂ ಸಾಂಕೇತಿ
ವೆನಿಸುತ್ತದೆ. ನನಗೆ ಪ್ರಿಯವಾದ ಎರಡು ವರ್ಣನೆಗಳನ್ನು ಇಲ್ಲಿ ನಾನು
ಗಮನಿಸಿದ್ದೇನೆ. ಮೊದಲನೆಯದಾಗಿ 'ಆತ' ಕೆಲಸಕ್ಕೆ ಹೋಗುವ 'ಬಿಸಿಲ
ಪುರ'ದ ಲಾಡ್ಜಿನ ಕಿಟಕಿಯ ಮೂಲಕ ಕಾಣುವ ಬೆಟ್ಟದ ವರ್ಣನೆ. ಇದು
ಒಂದೊಂದು ಹಂತದಲ್ಲೂ 'ಆತ' ಆ ಊರನ್ನು ಬಿಟ್ಟು ಬರುವವರೆಗೂ
ಕಾಣಿಸಿಕೊಳ್ಳುತ್ತದೆ. ಸಾಮಾನ್ಯವಾಗಿ ಬೆಟ್ಟ ಗಟ್ಟಿತನಕ್ಕೆ ಸಂಕೇತವಾಗಿ ಬರು
ತ್ತದೆ. ಆದರೆ ಇಲ್ಲಿ ಅದನ್ನೇ ಮುಂದುವರಿಸಿಕೊಂಡು ಬಿಸಿಲಿನ ಹಿನ್ನೆಲೆಯ
ಕರಗದ rigidity ಗೆ ಪರಿವರ್ತನಾಶೀಲರಾಹಿತ್ಯಕ್ಕೆ ಸಂಕೇತವಾಗಿ ಬರಬಹು
ದೆನಿಸುತ್ತದೆ. ಅದರ ಅಚಲತೆ, ಕಪ್ಪುತನ, ಜಾರುವ ಕಲ್ಲು ಇವು ಒಂದೊಂದು
ಹಂತದಲ್ಲಿ ಒಂದೊಂದು ಪರಿಣಾಮಕ್ಕೆ ನೆರವಾಗುತ್ತವೆ. ಕೆಲವೊಮ್ಮೆ ದೂರದ
ಮೃತ್ಯುವಿಗೂ ಅಂದರೆ ಮಾನವ ಕೋಟಿಯ ಅಧಃಪತನಕ್ಕೂ ಸೂಚನೆಯಾಗ
ಬಹುದು. ಅವನಿಗೆ ಕಿಟಕಿಯ ಮೂಲಕ ನೋಡಬೇಕಾದ ನೋಟಕ್ಕೆ ಅಡ್ಡ
ಬರುತ್ತದೆ. ಅಂತೆಯೇ ಕಾಲದ ಪರಿವೆಯನ್ನು ತಂದು ಕೊಡಬಹುದಾದ
ಸೂರ್ಯನನ್ನು ಕಾಣಗೊಡದೆ ಊರಿನ ಮೇಲೆ ತನ್ನ ಝಳವನ್ನೂ ನೆರಳನ್ನೂ
ಕರಿಸುತ್ತದೆ. ಹೀಗೆ ಅದು ಕಾಲದೇಶಗಳನ್ನು ಒಂದು ಗೂಡಿಸುವ ಪರಿವರ್ತನಾ
ರಾಹಿತ್ಯಶಕ್ತಿಗೆ ಸಂಕೇತವಾಗಿ ಬರುತ್ತದೆಂದು ಅನಿಸುತ್ತದೆ.

ಮೈಸೂರಿನ ಹೋಟೆಲೊಂದರಲ್ಲಿ 'ಆತ' ಮಲಗಿದ್ದಾಗ ಕಸದ ಬುಟ್ಟಿಯೊಂದರಲ್ಲಿ
ಕೊಳೆತು ನಾರುತ್ತಿದ್ದ ಕೋಸೊಂದನ್ನು ತೆಗೆದು ಹಾಕುವ ಸಂದರ್ಭದ ವರ್ಣನೆ,

ಕಸದ ಬುಟ್ಟಿ ಇಡೀ ಸಮಾಜಕ್ಕೆ ಪ್ರತೀಕವಾಗಿ ಪದರಪದರವಾಗಿರುವ ಕೋಸು ಕೊಳೆತು ನಾರುತ್ತಿದ್ದಾಗ ಅದನ್ನು ಪರಿಹರಿಸಲು ಪಡುವ ವಿಫಲಯತ್ನ, ಬದುಕಿನ ಹಲವು ಸಮಸ್ಯೆಗಳನ್ನು ಬಿಡಿಸಲು ಹೋದಾಗ ಹೊಸ ಹೊಸ ಸಮಸ್ಯೆಗಳು ಸುತ್ತಿಕೊಳ್ಳುವ ಸ್ಥಿತಿಯನ್ನು ಇದು ಅರ್ಥಪೂರ್ಣನಾಗಿ ಮುಟ್ಟಿಸುತ್ತದೆ. ಕಾದಂಬರಿಯ ಅಂತ್ಯದಲ್ಲಿ ಬರುವ ಜೋಗ ಜಲಪಾತದ ವರ್ಣನೆ ಹಾಗೂ 'ಆತ'ನ ಮನಃ ಸ್ಥಿತಿ, ಅದೇ ಸಮಸ್ಯೆಯ ಇನ್ನೊಂದು ಮುಖವಾಗಿ ಪಾತಾಳದಿಂದೇಳುವ ವ್ಯರ್ಥಪ್ರಯತ್ನವನ್ನು, ಅನಿಶ್ಚಿತ ಸ್ಥಿತಿಯನ್ನು ಸಶಕ್ತವಾಗಿ ವಹನಿಸುತ್ತದೆ.

ಇದರಲ್ಲಿಯ ಭಾಷೆಯ ಹಾಸು ಬೀಸು ವೈವಿಧ್ಯಮಯವಾಗಿ ಬಂದಿದೆ. 'ಆತ'ನ ಧೋರಣೆ ಹಾಗೂ ಬಳಸಲ್ಪಡುವ ಭಾಷೆ ತಮ್ಮ ನಿಗೂಢ ಸಾಹಚರ್ಯದಿಂದ ತೀವ್ರವಾದ ಪರಿಣಾಮವನ್ನುಂಟುಮಾಡಲು ಸಹಕಾರಿಯಾಗಿವೆ. ಕಾದಂಬರಿಯ ಗತಿ, ವಿವರಣೆ ಹಾಗೂ ಅನುಭವದ ಸ್ವರೂಪಕ್ಕೆ ತಕ್ಕಂತೆ ಭಾಷೆ ವೇಷಹಾಕಿಕೊಂಡು ವರ್ತಿಸುತ್ತದೆ. ಬಿಸಿಲಿನ ತಾಪವನ್ನು ಭಾಷೆ ಹೇಗೆ ಭಟ್ಟಿ ಇಳಿಸುತ್ತದೆ ಎಂಬುದಕ್ಕೆ ಈ ಕೆಳಗಿನ ಸಾಲುಗಳನ್ನು ಉದ್ಧರಿಸಬಹುದು :

"ತಲೆಗೆ ಹರಳೆಣ್ಣೆಯನ್ನು ಸುರಿದುಕೊಳ್ಳದೆ ಈ ಊರಿನ ರಸ್ತೆಗೆ ಇಳಿದರೆ ಚಿಕ್ಕಂದಿನಲ್ಲಿ ಗಾಜಿಲ್ಲದ ಸೀಮೆಯೆಣ್ಣೆಯ ಬುಡ್ಡಿದೀಪದ ಎದುರು ಕುಳಿತುಕೊಂಡು ತೊಡೆಯ ಮೇಲೆ ಪಾಟಿ ಇಟ್ಟುಕೊಂಡು ಬಗ್ಗಿ ಬಾಗಿ ಅ ಆ ಇ ಈ ಬರೆಯುತ್ತಿದ್ದಾಗ ಆ ತಲೆಗೂದಲು ದೀಪಕ್ಕೆ ತಾಗಿ ಚರ ಚರ ಸುಟ್ಟಂತೆ ಸುಟ್ಟು ಹೋಗಬಹುದು. ಆದರೆ ತಲೆಗೆ ಎಣ್ಣೆ ಹಾಕಿಕೊಂಡರೆ ತಲೆಯೊಂದು ನರಕದ ಕೊಪ್ಪರಿಕೆಯಾಗಬಹುದು. ಎಣ್ಣೆ ಹಾಕಿಕೊಳ್ಳದಿದ್ದರೆ ಒಣಗಿದ ಹುಲ್ಲಿನ ಮೆದೆ ಬೆಂಕಿಗೆ ತುತ್ತಾದ ಮೆದೆ ಆಗಬಹುದು."೧ ಭಾವನೆಯ ಉದ್ವೇಗದಲ್ಲಿ ಭಾಷೆ ಕೆಲವೊಮ್ಮೆ ಲಯಬದ್ಧವಾಗಿ ಕಾವ್ಯಾತ್ಮಕವಾಗಲು ತುಡಿಯುವುದನ್ನು ಕಾಣಬಹುದು. "ಥತ್ ಬಿಸಿಲೇ, ಬೋಳಿಮಗನೇ, ಕೊಳಕುಗಲ್ಲಿಗಳೇ, ಕಾಣಕಲ್ಲುಗಳೇ"೨ ಅನ್ನುವಾಗ ಪಂಪನ ಪದ್ಯವೊಂದು ನೆನಪಿಗೆ ಬಾರದಿರದು. ಹಾಗೆಯೇ

೧ ಗತಿ, ಸ್ಥಿತಿ. ಪು. ೩೯.

೨ ಅದೇ ಪು. ೩೯.

"ಮಲಗಿದರೆ ಗಡಗಡಾ ಅಲ್ಲಾಡುವ ಸೊಂಟದೆತ್ತರದ ಮುತ್ತಜ್ಜನ ಕಾಲದ ಆ
ಹಳೆಯ ಮಂಚವನ್ನು ನೋಡು,
ಆ ಕವುಟು ಹಿಡಿದ ಕೊಳೆಮೆತ್ತಿಕೊಂಡ ಒಣಗಿ ಚರಟವಾದ ಹಾಸಿಗೆಯನ್ನು
ನೋಡು
ಆ ಮಾಸಲು ಬೆಡ್‌ಷೀಟನ್ನು ನೋಡು
ಅದರ ಮೇಲಿನ ಹೊಲಸು ಕಲೆಗಳನ್ನು ನೋಡು
ಆ ಕೊಳಕಲು ಹೂಜಿಯನ್ನು ನೋಡು"[೧] ಇತ್ಯಾದಿ.

ಕಾದಂಬರಿಯ ಕ್ರಿಯೆಗೆ ಅಪ್ರತ್ಯಕ್ಷನಾಗಿ ಶರಣಾಗುವ ಭಾಷೆಯನ್ನು ಗಮನಿಸಬಹುದು. "ಧಾವಿಸಿ ಹೋಗಿ ಐದನೆಯ ಮೆಯಿನ್ ರೋಡಿನ ಮೂಲೆಯಲ್ಲಿ ನಿಂತಾಗ ಮೂರು ಘಂಟೆಯ ಬಿಸಿಲು. ರಸ್ತೆಯಲ್ಲಾ ಖಾಲಿಯಾಗಿತ್ತು. ದೂರದಲ್ಲೊಂದು ಆಟೋನೋ ಜಟಕಾನೋ ಕಾರು. ಬಿಸಿಲು. ಈ ಕಡೆ. ಈ ತುದಿಯಲ್ಲಿ ಆಟೋನೋ ಅಲ್ಲ ಕಾರು".[೨] ಇದು ಅವನ ಅವಸರದ ಮನಃ ಸ್ಥಿತಿಯಲ್ಲಿ ನಡೆಯುವ ಅಂತರಂಗ ಕ್ರಿಯೆಗಳನ್ನೆಲ್ಲಾ ಸೂಚಿಸುತ್ತದೆ. ರಸ್ತೆಯ ಮಧ್ಯೆ ನಿಂತಾಗ, ನಿರೀಕ್ಷೆಯ ವಸ್ತುವಾಗಿಯೇ ಪ್ರತಿಯೊಂದನ್ನು ಕಂಡು ನಂತರ ನಿರಾಸೆಗೊಳ್ಳುವ ಕ್ರಿಯೆಯನ್ನು ವಾಕ್ಯಗಳೇ ಸೂಚಿಸುತ್ತವೆ. ಇಂಥ ಕಡೆಯೇ ನಾನು ಭಾಷೆ ಭಾವಕ್ಕೆ ತಕ್ಕಂತೆ ವರ್ತಿಸುತ್ತದೆ ಎಂದು ಹೇಳಿದುದು. ಒಟ್ಟಿನಲ್ಲಿ ಗಿರಿಯವರದು ಸಮರ್ಥ ಭಾಷೆ, ಸಮರ್ಥ ಬಳಕೆ. ಕೃತಿಯಲ್ಲಿ ಏನೆಲ್ಲ ದೌರ್ಬಲ್ಯಗಳಿದ್ದರೂ ಭಾಷೆ ಸಂವೇದಿಸುವ ಭಾವನೆಯು ಒಂದು ವಿಶಿಷ್ಟ ಸ್ಥಿತಿಯಲ್ಲಿ ಅದನ್ನೆಲ್ಲಾ ಮರೆಯಬಹುದಾದರೂ ಕೃತಿಯ ಸೋಲಿಗೆ ಗಮನಾರ್ಹ ಕಾರಣಗಳಾಗುತ್ತವೆ. ಆದ್ದರಿಂದ ಗತಿ,ಸ್ಥಿತಿ ಮಹತ್ವದ ಕೃತಿಯಾಗುತ್ತದೆಯೇ ಹೊರತು ಮಹಾಕೃತಿಯಾಗಲಾರದು.

ಒಟ್ಟಿನಲ್ಲಿ ಗಿರಿಯವರ 'ಗತಿ, ಸ್ಥಿತಿ' ಈ ದಶಕದಲ್ಲಿಯ ಒಂದು ಗಮನಾರ್ಹ ಕೃತಿ ಎಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಕಾದಂಬರಿಯಲ್ಲಿ ಬಳಸಿರುವ ಭಾಷೆ ಹಾಗೂ ಅದು ತಂದುಕೊಡುವ ವಿಶಿಷ್ಟ ಅನುಭವ ಇವು ಅದರ ಮಹತ್ತನ್ನು ಹೆಚ್ಚಿಸಿವೆ.

■ ■ ■

೧ ಗತಿ, ಸ್ಥಿತಿ. ಪು. ೧೨೩.
೨ ಅದೇ ಪು. ೧.

ಎಂ. ಜಿ. ಈಶ್ವರ್

ಬ್ಯಾಚಲರ್ ಪುಂಸ್ತ್ರೀಲಿಂಗಗಳು

ಕಥೆ

'ನಮ್ಮ ಉದ್ದೇಶ ಇಷ್ಟೆ' ಎಂದು ತುಂಬುಗಲ್ಲದ ವಿಜಿ ನಮ್ಮೆಲ್ಲರ ಗಮನ ಸೆಳೆದಳು. 'ನಾವು ಎಲ್ಲಾ ವಿಷಯಗಳನ್ನೂ ಯಾವ ಎಗ್ಗು ತಗ್ಗೂ ಇಲ್ಲದೆ ನಿಚ್ಚಟವಾಗಿ ಚರ್ಚಿಸಬೇಕು. ಇದನ್ನು ಕೇವಲ ಚರ್ಚೆಗೋಸ್ಕರ ನಿರ್ಮಿಸಿಕೊಂಡಿರುವ ಗುಂಪು ಎಂದರೂ ಆಯ್ತು. ಇದಕ್ಕೆ ಇಂಥವರೇ ಬರಬೇಕೆಂಬ ನಿಯಮವೇನೂ ಇಲ್ಲ. ನಮ್ಮ ತರಗತಿಯ ಎಲ್ಲ ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಇದಕ್ಕೆ ಅರ್ಹರು ಅಥವಾ ನಮ್ಮ ಮಟ್ಟದವರು ಯಾರು ಬಂದರೂ ನಡೆಯುತ್ತದೆ.'

'ಅನಂತರ' ತುಟಿಯೊಳಗಡೆ ಸಿಕ್ಕಿಕೊಂಡಿದ್ದ ಸಿಗರೇಟನ್ನು ಹೊರಗೆ ತೆಗೆಯುತ್ತಾ ನಾನು ಶುರು ಮಾಡಿದೆ. 'ನಮ್ಮೆಲ್ಲರ ಬೌದ್ಧಿಕ ಬೆಳವಣಿಗೆಗೆ ವಸ್ತುಗಳ ಅಥವಾ ವಿಷಯದ ಚರ್ಚೆ ಬಹು ಅಗತ್ಯ. ಅದರಲ್ಲೂ ಇತ್ತೀಚೆಗೆ ಯುವಕ ಯುವತಿಯರ ಪಾತ್ರ ಸಮಾಜದಲ್ಲಿ ಬಹು ಗಮನಾರ್ಹವಾದದ್ದು. ನಾವು ನಮ್ಮ ನಮ್ಮ ಪ್ರಚಲಿತ ರಾಜಕೀಯ ವಿಷಯಗಳ ಬಗೆಗೆ, ಲೈಂಗಿಕ ವಿಷಯಗಳ ಬಗ್ಗೆ ಬಹಳ ಸೀರಿಯಸ್ಸಾಗಿ ವಿಚಾರ ಮಾಡಬೇಕು. ಹೀಗೆ ಚರ್ಚಿಸುವಾಗ ನಾವು ನಿರ್ಭಿಡೆಯಿಂದ ವರ್ತಿಸಬೇಕಾದದ್ದು ಮೊದಲ ನಿಯಮ. ಯಾರಿಗೂ ಹೆದರದೆ ಮಾತನಾಡಬೇಕಾದದ್ದು ಎರಡನೆಯ ನಿಯಮ.'

'ಎಲ್ಲಾ ಸರಿ' ಕುರ್ಚಿಯನ್ನು ಹತ್ತಿರಕ್ಕೆ ಎಳೆಯುತ್ತ ಚಂದ್ರು ಶುರು ಮಾಡಿದ. 'ಲೈಂಗಿಕ ವಿಷಯದ ಬಗ್ಗೆ ಬಹಳ ಬಿಚ್ಚುಮನಸ್ಸಿನಿಂದ ಮಾತನಾಡಬೇಕು ಎಂದೆಯಲ್ಲ ಇದು ಸಾಧ್ಯವೇ ?'

'ಏಕೆ ಸಾಧ್ಯವಿಲ್ಲ ?' ಬಿಂಕದ ರಾಣಿಯ ಉತ್ತರ.

'ಮಿಸ್ ರಾಣಿ, ನಾವು ನಾವು ಒಂದೇ ಜಾತಿಯವರು ಸೇರಿಕೊಂಡರೆ ಅಂದರೆ ಐ ಮೀನ್, ಹುಡುಗರು ಹುಡುಗರು ಸೇರಿದಾಗ ಅಥವಾ ಹುಡುಗಿಯರು ಹುಡುಗಿಯರು ಸೇರಿದಾಗ ಅದರ ಬಗ್ಗೆ ಲೀಲಾಜಾಲವಾಗಿ ಮಾತಾಡಿಬಿಡಬಹುದು. ಆದರೆ ಹುಡುಗರು ಹುಡುಗಿಯರು ಮಾತಾಡಲಿಕ್ಕೆ ಸಂಕೋಚ ಇತ್ಯಾದಿಗಳು ಬರಬಹುದೇನೋ ಎಂದು ನನ್ನ ಅಭಿಪ್ರಾಯ.'

'ನೊ, ನೊ, ನಥಿಂಗ್ ಏನೂ ಆಗೋಲ್ಲ. ಆಗಲೂ ಕೂಡದು.' ರಾಣಿ ತನ್ನ ಮುಖ ಮುತ್ತುವ ಕೂದಲುಗಳನ್ನು ಒಂದಕ್ಕೆ ಸರಿಸುತ್ತಾ ದುಂಡನೆಯ ಬೆತ್ತದ ಕುರ್ಚಿಯ ಮೇಲೆ ತನ್ನ ದೇಹವನ್ನೆಲ್ಲ ಹರಡಿ ಆರಾಮಾಗಿ ಕೂತಳು.

ಇಂಥದರಲ್ಲೆಲ್ಲಾ ಚತುರೆಯಾಗಿದ್ದ ವಿಜಿ ತನ್ನ ಗಾಗಲ್ಸನ್ನೂ ಮೇಲೆ ಏರಿಸುತ್ತ ತನ್ನ ಸ್ಪೀಚನ್ನು ಆರಂಭಿಸಿದಳು. 'ನೋಡಿ ಮಿಸ್ಟರ್ ಚಂದ್ರು, ನಾನು ಯಾವ ವಿಷಯಗಳನ್ನೂ ಪರ್ಸನಲ್ ಆಗಿ ವಿಚಾರಮಾಡುವುದು ಬೇಡ. ಜನರಲ್ ಆಗಿ ಅದರ ಬಗ್ಗೆ ಚರ್ಚೆ ಮಾಡೋಣ. ಚರ್ಚೆಯ ಮಧ್ಯೆ ಭಾವುಕತೆ ಮಾತ್ರ ತಲೆಹಾಕಕೂಡದು, ಏಕೆಂದರೆ....'

'ಏಕೆಂದರೆ ಅದು ಬಹಳ ಅಪಾಯಕಾರಿ' ನಾನು ಮಧ್ಯೆ ಸೇರಿಸಿದೆ.

'ಹೌದೌದು, ಭಾವುಕತೆ ನಮ್ಮ ವೈಚಾರಿಕ ಮಟ್ಟವನ್ನು ಕುಗ್ಗಿಸಿ ಬಿಡುತ್ತದೆ. ಎಲ್ಲ ವಿಷಯಗಳನ್ನು ಎಲ್ಲರೂ ಸೇರಿ ಅನಲೈಸ್ ಮಾಡೋಣ. ಏಕೆಂದರೆ ಎಲ್ಲರೂ ಸೇರಿ ಮಂಥನ ಮಾಡಿದರೆ ಹೊಸ ಹೊಸ ವಿಚಾರಗಳು ಬರಬಹುದು.'

'ಸೊ ಕಮ್ ಟು ದಿ ಮ್ಯಾಟರ್'
–ಇಲ್ಲಿಯವರೆಗೆ ಗುಮ್ಮಣ್ಣ ಗುಸಕ್ಕನ ಹಾಗೆ ಸುಮ್ಮನೇ ಕೂತಿದ್ದ ಸಿಜು ತನ್ನ ಕುರ್ಚಿಯನ್ನು ಮುಂದೆಳೆಯುತ್ತ 'ನಾನು ಸಾಹಿತ್ಯದ ಮೇಲೆ ಬಹಳ ಖಯಾಲಿ ಉಳ್ಳವನು. ಈ ನವ್ಯ ಕಾವ್ಯದಲ್ಲಿ ಕಾಮವೇ ಬಹಳ ಪ್ರಧಾನವಾದ ಅಂಶ ಅಂತಾರಲ್ಲ ಇದಕ್ಕೇನಂತೀರಿ.'

'ತಮಗೆ ಆದಂತಹ ಅನಿಸಿಕೆಗಳನ್ನು ಓದುಗರಿಗೆ ಸಂವಹನ ಮಾಡಲಿಕ್ಕೋಸ್ಕರ ಹಾಗೆ ಕಾಮವನ್ನು ಬಳಸಿಕೊಳ್ತಾರೆ. ಏಕೆಂದರೆ ಕಾಮ ಎಲ್ಲರಿಗೂ ಹತ್ತಿರ

ವಾದಂತಹ ವಸ್ತು ಮತ್ತು ಹಿಡಿಸುವಂತಹ ವಸ್ತುವೂ ಹೌದು. ಅಲ್ಲದೆ ಇವರೇನೂ ಇದರಲ್ಲಿ ಆದ್ಯರಲ್ಲ. ಹಿಂದಿನ ಹಲವರೂ ಕಾಮವನ್ನು ಅಚ್ಚುಕಟ್ಟಾಗಿ ಬಳಸಿಕೊಂಡಿದ್ದಾರೆ. ಅಲ್ಲದೆ ಅಕ್ಕಮಹಾದೇವಿಯಂತೂ ನಿರ್ಭಯವಾಗಿ ಯಶಸ್ವಿಯಾಗಿಯೇ ಬಳಸಿಕೊಂಡಿದ್ದಾಳೆ ಅಂತ ಹೇಳಬಹುದು. ಭರತೇಶ್ವರ ವೈಭವದ ರತ್ನಾಕರ ವರ್ಣಿಯಂತೂ ಭೋಗವರ್ಣನೆಗೆ ಶಯ್ಯಾಗೃಹ ಸಂಧಿ, ಸಂಭೋಗ ಸಂಧಿ ಇತ್ಯಾದಿಯಾಗಿ ಪ್ರತ್ಯೇಕವಾದ ಸಂಧಿಗಳನ್ನೇ ಬರೆದಿದ್ದಾನೆ. ಈಗಿನವರು ತಮ್ಮ ಖಾಸಗಿತನಕ್ಕಾಗಿ ಹೆಚ್ಚಾಗಿ ಹೊಡೆದಾಡುವುದರಿಂದ, ಕಥಾ ರೂಪದ ವಸ್ತುವನ್ನು ಬಿಟ್ಟು ತಮ್ಮ ಕಾವ್ಯವನ್ನು ಭಾವಗೀತೆ ರೂಪದಲ್ಲಿ ಬರೆಯೋದರಿಂದ ಕಾಮದ ಹೆಚ್ಚಳ ನಮಗೆ ಅದರಲ್ಲಿ ಗೋಚರಿಸುವುದು ಅನಿವಾರ್ಯ. ಇದಕ್ಕೆ ಏನಂತೀರಾ ' ನನ್ನ ಕಡೆಗೆ ಬೊಟ್ಟು ಮಾಡಿದಳು ವಿಜಿ. ' ಯು ಆರ್ ರೈಟ್ ' ಎಂದೆ.

' ಒಂದೆರಡು ಉದಾಹರಣೆ ' ಎಂದ ಕಿಲಾಡಿ ಚಂದ್ರ.

' ಬೈ ಆಲ್ ಮೀನ್ಸ್ ' ಎಂದು ಬೀಕದ ರಾಣಿ ಶುರುಮಾಡಿದಳು. ' ಅಕ್ಕ ಮಹಾದೇವಿ ಕೆಲವು ವಚನಗಳಲ್ಲಿ ತಾನೇಕೆ ಬೆತ್ತಲೆಯಾಗಿದ್ದರೂ ಕೂದಲನ್ನು ದೇಹದ ಮೇಲೆ ಹರಿಯಬಿಟ್ಟಿದ್ದೇನೆ ಎಂದು ನಿರ್ಭಯವಾಗಿ ಹೇಳುತ್ತಾಳೆ. ತನಗೆ ಚನ್ನಮಲ್ಲಿಕಾರ್ಜುನನ ಮೇಲೆ ಇರುವ ತೀವ್ರ ಆಸಕ್ತಿಯನ್ನು ' ಈ ಕುಂಭ ಕುಚದ ಮೇಲೆ ನಿಮ್ಮನೆಂದಿಂಗಪ್ಪಿಕೊಂಬೆನಯ್ಯ ' ' ಅಪ್ಪಿದರೆ ಅಸ್ತಿಗಳು ನುಗ್ಗು ನುರಿಯಾಗಬೇಕು, ಎಚ್ಚರೆ ಗರಿದೋಗದಂತೆಚ್ಚಬೇಕು ' ಇತ್ಯಾದಿಯಾಗಿ ಹೇಳಿಕೊಳ್ಳುತ್ತಾಳೆ.'

' ಎಕ್ಸಲೆಂಟ್ ' ಎಂದವನು ' ಭರತೇಶ್ವರ ವೈಭವದಲ್ಲಿ ಕಾಮವನ್ನ ಆತ ತನ್ನ ಅನಿಸಿಕೆಗೆ ಮಾಧ್ಯಮ ಮಾಡಿಕೊಳ್ಳದಿದ್ದರೂ ಸಂಭೋಗ ಕ್ರಿಯೆಯನ್ನು ವರ್ಣಿಸಿದ್ದಾನೆ.' ವಿಜಯ ಕಡೆಗೆ ತಿರುಗಿ ಮತ್ತೆ ಪ್ರಾರಂಭಿಸಿದೆ. ' ರತ್ನಾಕರನಿಗೆ ಕಾಮ ಎನ್ನುವಂಥದ್ದು ಜೀವನದ ಮಾರ್ಗಮಧ್ಯದಲ್ಲಿ ಸಿಕ್ಕುವಂತಹ ಒಂದು ಅಮೂಲ್ಯ ವಸ್ತು. ಅದನ್ನು ನಾವು ಬೇರೆಯ ವಸ್ತುಗಳ ಹಾಗೆಯೇ ಕಂಡು ಅನುಭವಿಸಬೇಕು ಎಂಬುದು ಆತನ ಮನೋಭಾವ. ಆತ ಇದನ್ನು ವರ್ಣಿಸಬಾರದು ವರ್ಣಿಸಬಾರದು ಎನ್ನುತ್ತಲೇ ಎಲ್ಲದನ್ನು ವರ್ಣಿಸಿಬಿಡುತ್ತಾನೆ. ಹೀಗೆ

ಅನ್ನುವುದಕ್ಕೆ ಆತನಿಗೂ ಪರರ ಎದುರಿನಲ್ಲಿ ವರ್ಣಿಸುವುದಕ್ಕೆ ಅಂಜಿಕೆಯೋನೋ ಎನ್ನುವ ಗುಮಾನಿ ಬರುವುದುಂಟು. ಏನೇ ಆಗಲಿ ಆತ ಅದನ್ನು ಅಷ್ಟು ಚನ್ನಾಗಿ ವರ್ಣಿಸಿದ್ದಾನಲ್ಲ ಎನ್ನುವುದು ಮುಖ್ಯ.'

' ಅಲ್ಲದೆ ಕಾಮವನ್ನು ನಾವೇಕೆ ಮುಚ್ಚಿಡಬೇಕು. ಅದು ಎಲ್ಲರಲ್ಲಿಯು ಇರುವಂತಹ ವಸ್ತುವೇ ಅಲ್ಲವೇ ? ನಮ್ಮ ನಮ್ಮಲ್ಲಿರುವುದನ್ನು ಹೇಳಿಕೊಳ್ಳುವುದಕ್ಕೆ ನಮಗೇಕೆ ಅಂಜಿಕೆ ಸಂಕೋಚ ? ' ರಾಣಿ ಕತ್ತು ಕೊಂಕಿಸಿ ಕೇಳಿದಳು. ' ಎಸ್ ' ಎಂದೆ. ಆ ಕಡೆಯಿಂದ ನಮ್ಮ ಸಂಘದ ಇನ್ನೊಬ್ಬ ಸದಸ್ಯೆ ಕಾಂತಿ ಬರುವುದು ಕಾಣಿಸಿತು. ವಿಶ್ ಮಾಡಿ ಹಲೊ ಕಾಂತಿ ಎಂದೆ. ವಿಜಿ ಅವಳಿಗೆ ' ಯು ಆರ್ ಲೇಟ್ ' ಎಂದಳು. ' ಸಾರಿ ಫಾರ್ ಮೈ ಡಿಲೇ ' ಕಾಂತಿಯ ಉತ್ತರ. ' ಪರವಾಗಿಲ್ಲ ಚರ್ಚೆ ಇನ್ನೂ ಈಗೀಗ ಬಿರುಸಿಗೆ ಪ್ರಾರಂಭವಾಗುತ್ತಿದೆ ' ಎಂದ ಚಂದ್ರು. ' ಸೊ ಐಮ್ ಲಕ್ಕಿ ' ಎನ್ನುತ್ತ ಕಾಂತಿ ತನ್ನ ದೇಹವನ್ನು ಕುರ್ಚಿಯ ಮೇಲೆ ಇಟ್ಟು ಗಾಗಲ್ಸನ್ನು ಕೈಯಲ್ಲಿ ಹಿಡಿದುಕೊಂಡಳು.

' ನಮ್ಮ ಕೆಲವು ಅಧ್ಯಾಪಕರುಗಳು ಈ ತೆರದ ವಿಷಯಗಳು ಬಂದರೆ ಮುಖವನ್ನು ಹರಳೆಣ್ಣೆ ಕುಡಿದವರ ಹಾಗೆ ಮಾಡಿಕೊಂಡು ಬಿಡುತ್ತಾರೆ. ಇದಕ್ಕೆ ಒಳ್ಳೆಯ ನಿದರ್ಶನವೆಂದರೆ ನಮ್ಮ ರೀಡರ್.'

' ಹೌದೌದು ಅವರು ಮನೆಯಲ್ಲಿಯೇ ಆ ವಿಷಯದ ಸಾಲುಗಳನ್ನು ಪದ್ಯಗಳನ್ನು ಗುರುತುಹಾಕಿಕೊಂಡು ಬಂದು ಬಿಟ್ಟಿರ್ತಾನೆ. ಅಪ್ಪಿತಪ್ಪಿ ಆ ಥರದ ಪದಗಳನ್ನು ಓದಿಬಿಟ್ಟರೆ ಅವರ ನಾಲಿಗೆ ಮೈಲಿಗೆಯಾದಂತೆಯೇ.'

' ಹ ಇನ್ನೊಂದು ವಿಷಯ, ಮೊನ್ನೆ ಎಕ್ಸ್‌ಕರ್ಷನ್‌ಗೆ ಹೋದಾಗ ಕೊನೆಯಲ್ಲಿ ಆಶುಭಾಷಣ ಏರ್ಪಡಿಸಿದ್ದೆವಲ್ಲ. ಆಗ ಆ ರೀಡರ್‌ಗೆ ' ತರಗತಿಯಲ್ಲಿ ಹುಡುಗ ಹುಡುಗಿಯರು ಜೊತೆಗೆ ಕೂತರೆ ' ಎಂದು ಬಂದಿತ್ತು. ಆಗ ಅವರು ಏನು ಹೇಳಿದರು ಗೊತ್ತಲ್ಲ ' ಕುತೂಹಲ ಕೆರಳಿಸಿದಳು ರಾಣಿ. ಟ್ರಿಪ್ಪಿಗೆ ಹೋಗದಿದ್ದ ನಾನು ' ಏನು ಹೇಳಿದರು ? ' ಎಂದೆ. ರೀಡರ್ ನಟನೆಯನ್ನೇ ಅನುಸರಿಸುತ್ತಾ ರಾಣಿ ' ಸ್ವಲ್ಪ ಹೊತ್ತು ಕಣ್ಣು ಬಿಟ್ಟು ಎಲ್ಲರನ್ನೂ ನೋಡ್ತೇನೆ. ಅನಂತರ ಹುಡುಗರನ್ನೆಲ್ಲ ಎಬ್ಬಿಸಿ ಒಂದು ಕಡೆಗೆ ಕೂಡಿಸ್ತೇನೆ ' ಎಂದರು ಎಂದಳು.

‘ ಅಂತೂ ಹುಡುಗಿಯರನ್ನು ಎಬ್ಬಿಸೋಲ್ವಲ್ಲ, ಅವರೊಬ್ಬ ಗುಗ್ಗು ’ ಎಂದ ಚಂದ್ರು.

‘ ಛೆ, ಛೆ ಪಾಪ ಅವರು ತುಂಬ ಸಂಪ್ರದಾಯಸ್ಥರು ಅಂತ ಕಾಣ್ಸುತ್ತೆ. ಅದಕ್ಕೇ ಹಾಗಂದ್ರು ಅವರು. ’ ಕಾಂತಿ ತನ್ನ ಮುಖದ ಮೇಲಿನ ಬೆವರನ್ನು ಒರಸುತ್ತ ಹೇಳಿದಳು. ವಿಜಿಗೆ ಬಿಸಿಯೇರಿತು. ‘ ಏ ಕಾಂತಿ, ನೀನು ನಮ್ಮ ಈ ಕ್ಯಾಂಟೀನ್ ಸಂಘಕ್ಕೆ ನಾಲಾಯಕ್ಕು. ಹುಡುಗರು ಹುಡುಗಿಯರು ಜೊತೆಗೆ ಕೂತರೆ ಗಂಟೇನೇ ಹೋಯ್ತು? ನಮಗೇನು ಅಷ್ಟು ಬುದ್ಧಿಯಿಲ್ಲವೆ, ಜವಾಬ್ದಾರಿಯಿಲ್ಲವೇ ಅಥವಾ ಅವರೇನಾದರೂ ನಮ್ಮೆಲ್ಲರ ಜವಾಬ್ದಾರೀನೂ ತಲೆಮೇಲೆ ಹೊತ್ಕೊಂಡಿದಾರೋ ? ’

‘ ಅಕಸ್ಮಾತ್ ರೀಡರ್ ಈಗ ಈ ಕ್ಯಾಂಟಿನ್‌ಗೆ ಬಂದರೆ ? ’

‘ ಏನ್ ಮಾಡ್ತಾರೆ ? ಇದೇನು ಕ್ಲಾಸಲ್ವಲ್ಲ ಹುಡುಗರು ಹುಡುಗಿಯರು ಜೊತೆಗೆ ಕೂತ್ಕೊಬಾರದು ಅಂತ ಹೇಳೋಕೆ ’

‘ ಅದ್ಸರಿ ಅನ್ನು ’ ಕಾಂತಿ ವಿಕಾಂತಿಯಾದಳು.

‘ಓ ಪ್ಲೀಜ್ ಕಮ್ ಟು ದಿ ಮ್ಯಾಟರ್’ ವಿಜು ಮತ್ತೆ ರಾಗ ಎಳೆದ. ‘ನನಗೆ ಈ ನವ್ಯರಲ್ಲಿ ಕಾಣುವಂತಹ ಲೈಂಗಿಕ ಪ್ರತಿಮೆಗಳು ತುಂಬಾ ಹಿಡಿಸುತ್ವೆ.’

‘ಆದರೆ ಆ ಪ್ರತಿಮೆಗೆ ಕವನದ ಪರಿಸರದಲ್ಲಿ ಎಷ್ಟರಮಟ್ಟಿಗೆ ಬೆಲೆ ಬಂದಿದೆ ಎನ್ನುವುದು ಮುಖ್ಯ ಅಲ್ವೇ ನಿಜು’ ನಾನು ಇನ್‌ಸಿಸ್ಟ್ ಮಾಡಿದೆ. ‘ಅದು ಕರೆಕ್ಟ್‌ಲು’ ಸಿಗರೇಟನ್ನು ಹಚ್ಚಿದೆ. ‘ಇಲ್ಲದಿದ್ದರೆ ಕವನ ಯಶಸ್ಸನ್ನು ಪಡೆಯುವುದಿಲ್ಲ ಅಲ್ಲವೇ. ನಿಸಾರರು ಇಂಥ ಪ್ರತಿಮೆಗಳನ್ನು ಬಹಳ ಅರ್ಥಪೂರ್ಣವಾಗಿ ಬರಿತಾರೆ. ಒಂದು ಕಡೆ ಹೀಗೆ ಹೇಳ್ತಾರೆ :

> ‘ಇಕ್ಕಟ್ಟು ಸಂಧಿಯಲಿ ಧಿಕ್ಕೆಟ್ಟ ಪೊಲ ಹೊಕ್ಕು
> ಕಚಕುಳಿಯನಿಟ್ಟಂಥ ಮುಲು ಮುಲಾಟ
> ಅಮ್ಮ ಕುಚ್ಚಿಸಿಕೊಂಡ ಕೈಯ ಮೇಲಿನ ಕರೆತ
> ಕಾಂಪೌಂಡು ಪಾತಿಯಲಿ ಕೋತಿಕಾಟ.’

ನಾನು ಎಲ್ಲರನ್ನೂ ಮಿಕಿಮಿಕಿ ನೋಡಲಿಕ್ಕೆ ಪ್ರಾರಂಭಿಸಿದೆ. ಕಾಂತಿ ತೆಗೆದಿಟ್ಟ ಗಾಗಲ್ಸನ್ನು ಹಾಕುವುದರಲ್ಲಿ ನಿರತಳು. ವಿಜಿ ಯೋಚನಾಮಗ್ನಳು. ರಾಣಿ ತುಟಿ ಕಡಿಯುತ್ತಾ ಕೂತಿದ್ದಾಳೆ. ಚಂದ್ರು ಸಿಗರೇಟಿನ ಹೊಗೆಯಲ್ಲಿ ತಲ್ಲೀನ. ನಿಜು ಉತ್ತರವನ್ನು ನಿರೀಕ್ಷಿಸುತ್ತಿದ್ದಾನೆ.

'ಮಿಸ್ಟರ್ ನಿಜು, ಇದು ಪ್ರಾಯ ಕವನದ ಕೆಲವು ಸಾಲುಗಳಲ್ಲವೆ ?'

'ಎಸ್'

ವಿಜಿ ಪ್ರಾರಂಭಿಸಿದಳು 'ಮಿಸ್ಟರ್ ನಿಜು, ಕವನದ ಮೂಲ ಉದ್ದೇಶ ಯೌವನದ ವರ್ಣನೆ. ಆಗುವ ಆಂತರಂಗಿಕ ಅನುಭವಳಿಗೆ ಇದೊಂದು ಪ್ರತಿಮೆ. ಲೈಂಗಿಕ ಪ್ರತಿಮೆ ಎನ್ನುವುದರಲ್ಲಂತೂ ಸಂದೇಹವೇ ಇಲ್ಲ. ನಮ್ಮ ಹಿಂದಿನ ಕವಿಗಳು ಪ್ರಾಯದ ವ್ಯಕ್ತಿಗಳನ್ನು ವರ್ಣಿಸುವಾಗ ದೇಹದ ಅವಯುವಗಳನ್ನು ಅದಕ್ಕೆ ಇದಕ್ಕೆ ಎಂದು ಹೋಲಿಸಿ ಹೇಳುತ್ತಿದ್ದುದುಂಟು.'

ಮಧ್ಯೆ ರಾಣಿಯು 'ಉದಾಹರಣೆಗೆ ತುಟಿಯನ್ನು ತೊಂಡೆಹಣ್ಣಿಗೂ, ಕೆನ್ನೆ ಯನ್ನು ಟೊಮ್ಯಾಟೊ ಹಣ್ಣಿಗೂ, ಕಣ್ಣುಗಳನ್ನು ಕಮಲದ ದಳಗಳಿಗೂ, ಬಣ್ಣವನ್ನು ಚಂದ್ರನನ್ನೇ ಸಾರವಿಳಿಸಿ ಪಾರದರ್ಶಕ ಕುಂಚದಿಂದ ಲೇಪಿಸಿದರು ಎಂದೂ ಇತ್ಯಾದಿ ಇತ್ಯಾದಿಯಾಗಿ,'

ಪುನಃ ವಿಜಯು 'ಹೌದೌದು, ಆದರೆ ಮನದೊಳಗೆ ಆಗುವ ಅವಸ್ಥೆಯನ್ನು ನಿಸಾರರಷ್ಟು ಯಶಸ್ವಿಯಾಗಿ ಯಾರೂ ಹೇಳಿದ್ದಿಲ್ಲ ಎನಿಸುತ್ತದೆ. ಅದನ್ನು ಅಭಿವ್ಯಕ್ತಿಸುವುದಕ್ಕೋಸ್ಕರ ಕವಿಯು ಇಲ್ಲಿ ಲೈಂಗಿಕ ಪ್ರತಿಮೆಗೆ ಮೊರೆಹೋಗಬೇಕಾಗಿ ಬಿದ್ದುದು ಅನಿವಾರ್ಯ ಎಂದು ತೋರುತ್ತದೆ.'

'ಹಾಗಾದರೆ ಕವನಗಳಲ್ಲಿ ವರ್ಣನೆಗೆ ಪ್ರಾಮುಖ್ಯತೆ ಕೊಟ್ಟ ಹಾಗಾಗಲಿಲ್ಲವಲ್ಲ' ಚಂದ್ರು ಮಧ್ಯೆ ತಲೆ ಹಾಕಿದ.

ಅಷ್ಟರಲ್ಲಿ ನಾನು 'ನೋಡು ಮಿಸ್ಟರ್ ಚಂದ್ರು, ನಮಗೆ ಇಲ್ಲಿ ವರ್ಣನೆಗೆ ಗೌಣ ಬಂತು ಎಂದು ಹೇಳುವುದು ಮುಖ್ಯವಲ್ಲ. ಹಿಂದಿನವರು ಹೇಳಿದ್ದನ್ನೆ ಹೇಳುತ್ತಾ ಹೋದರೆ ಬೇಜಾರಾಗೋಲ್ವೆ? ಅಲ್ಲದೆ ಇಲ್ಲಿ ಲೈಂಗಿಕವೇ ಮುಖ್ಯವಾಗಿ ಉದ್ಭವ

ವಾಗುವ ಪ್ರಾಣವನ್ನು ಹೇಳಬೇಕಾದರೆ ಅವರು ಹೀಗೆ ಹೇಳಿರುವುದು ತುಂಬ ಸೊಗಸಾಗಿದೆ.' ಹೀಗೆಂದವನೇ ವಿಜು ಮತ್ತು ರಾಣಿಯರ ಕಡೆ ನೋಡಿದೆ. ಅವರ ಮುಖಗಳೂ ಸಮ್ಮತಿ ಸೂಚಿಸಿದುವು.

ಒಂದು ನಿಮಿಷ ಮೌನ. ಎಲ್ಲರೂ ತಮ್ಮ ತಮ್ಮ ಆಲೋಚನೆಗಳಲ್ಲಿ ಮಗ್ನರು. ಸಮಯವು ಆಗುತ್ತಿದ್ದರೂ ಕ್ಯಾಂಟೀನಿಗೆ ಬಂದು ಹೋಗುವವರ ಮೇಲೆ ಯಾರ ಗಮನವೂ ಇಲ್ಲ. ನಾವು ಕೂತಿದ್ದ ಸ್ಥಳವೇ ಎಲ್ಲರಿಂದ ದೂರಾದ ಒಂದು ಮೂಲೆ. ಆ ಸ್ಥಳ ನಮಗೆಂದೇ ರಿಸರ್ವಾಗಿಯೋ ಸಿದ್ಧವಾಗಿರುತ್ತಿತ್ತು. ಚರ್ಚೆಯಲ್ಲಿ ತೊಡಗಿದ ಮಂದಿ ಮಾಮೂಲಿನಂತೆ ಕಾಫಿ ಹೀರಿ ಅಲ್ಲಿಂದ ತೆರಳುತ್ತಿದ್ದವು. ನಮ್ಮ ತರಗತಿಯ ವಿದ್ಯಾರ್ಥಿಗಳೇ ಅತ್ತ ಕಡೆ ಹಾದು ಹೋದುದನ್ನು ಕಂಡೆ. ಹಾಗೆಯೇ ಕೆಲವು ಅಧ್ಯಾಪಕರುಗಳೂ ಸಹ ಮೌನವನ್ನು ಭೇದಿಸಿ ರಾಣಿ ಏನೋ ಹೊಳೆದವಳಂತೆ ಹೇಳಲು ಉಪಕ್ರಮಿಸಿದಳು.

'ನನಗೆ ರಾಮಾನುಜನ್‌ರ ಕಾವ್ಯ ತುಂಬ ಇಷ್ಟ. ಅವರ ಎಲ್ಲ ಕವನಗಳು ಅರ್ಥವಾಗಿವೆ ಅಂತ ಹೇಳಲಾರೆ. ಆದರೆ ಅವರು ಒಂದು ಕಡೆ ಹೀಗೆ ಬರೀತಾರೆ— ನಾವು ಅಂದರೆ ಮೈಸೂರಿನವರು ಇಲ್ಲಿದ್ದಾಗ ಕೇವಲ ಪೊಳ್ಳು ಮಾತುಗಳಿಂದಲೇ ಕನ್ನಡದ ಬಗ್ಗೆ ಹೊಗಳಿಕೊಳ್ತೇವೆ. ಆದರೆ ಅಮೇರಿಕಕ್ಕೆ ಹೋದಾಗ ತಾನಾಗಿಯೇ ಪದ್ಯ ಬರೆಯುವ ಚಟ ಹುಟ್ಟುತ್ತದೆಯಂತೆ. ಅದನ್ನ— ಏನೇ ಆಗಲಿ, ಸ್ವಾಮಿ ದಬೆ ಕಟ್ಟದೆ ತಾನೇ ಎದ್ದು ಬಂತಲ್ಲ ಪದ್ಯ'

'ಫೈನ್' ಎಂದು ವಿಜು ಸಿಗರೇಟಿಗೆ ಮುತ್ತಿಟ್ಟು ಕೆಂಪಾಗುವಂತೆ ಮಾಡಿದ್ದ 'ಒಳ್ಳೆ ಎಫೆಕ್ಟಿವ್ ಆಗಿದೆ ಪ್ರತಿಮೆ ಎಂದ ಚಂದ್ರು'

ನಾನು ಏನೂ ಹೇಳಲೇ ಇಲ್ಲ.

ಸಮಯವಾಯಿತೆಂದು ಸೂಚಿಸಲು ಕ್ಯಾಂಟೀನ್ ಮಾಣಿ ಬಂದ. ಆರು ಕಾಫಿಗೆ ಆರ್ಡರ್ ಮಾಡಿದ್ದಾಯಿತು. ಕಾಫಿ ಬರುವ ತನಕ ಯಾರೂ ಪಿಟಕ್ ಎನ್ನಲಿಲ್ಲ. ಕಾಫಿ ಬಂದನಂತರ ಕಪ್ಪು ಸಾಸರ್‌ಗಳ ಶಬ್ದ, ಚಮಚಗಳಿಂದ ಸಕ್ಕರೆ ಕರಗಿಸುವಾಗ ಆಗುವ ಗರಗರ ಶಬ್ದ. ಅನಂತರ ಕಾಫಿ ಹೀರುವಾಗ ಆಗುವ ಸೊರ್‌ಸೊರ್ ಶಬ್ದ.

ಇದುವರೆಗೂ ನನಗಿದ್ದ ಒಂದು ಅನುಮಾನವನ್ನು ನಾನು ಪರಿಹಾರ ಮಾಡಿ ಕೊಳ್ಳಲಿಕ್ಕೆ ಪ್ರಾರಂಭಿಸಿದೆ— 'ನೋಡಿ ಸ್ನೇಹಿತರೆ, ನಾವು ಮಾಡುವ ಈ ಚರ್ಚೆಗಳು ಕೇವಲ ಸೈದ್ಧಾಂತಿಕ. ಆದರೆ ವಾಸ್ತವಿಕ ಅಂಶಗಳ ಚರ್ಚೆಗೆ ಬಂದಾಗ ನಾವು ಹೀಗಿರಲಿಕ್ಕೆ ಸಾಧ್ಯವೇ ?' ಎಂದೆ.

'ವೈ ನಾಟ್' ಎಂದಳು ವಿಜಿ.

'ಆಗಲೂ ನಿರ್ಲಿಪ್ತರಾಗಿದ್ದು, ಭಾವುಕತೆಯಿಂದ ದೂರವಾಗಿದ್ದು ಬಿಟ್ಟರಾಯ್ತು' ಎಂದಳು ರಾಣಿ. ಹೌದೌದು ಎಂದಳು ಒತ್ತಾಯಪೂರ್ವಕವಾಗಿ ಕಾಂತಿ. ಅಷ್ಟೆ ಅಷ್ಟೆ ಎಂದು ತಲೆಹಾಕಿದರು ಕೌಲೆತ್ತಿನಂತೆ ಚಂದ್ರು, ನಿಜು.

ಮತ್ತೆ ಮೌನ........

ಆ ಕಡೆ ಕ್ಯಾಂಟಿನ್ ಮಾಣಿಯ ವರದಿಯ ಶಬ್ದ. ಕಾಂಟೀನ್‌ಗೆ ಬರುವವರ, ಹೋಗುವವರ ಬೂಟುಗಾಲಿನ ಶಬ್ದ. ತಿನ್ನುವವರ ಕುಡಿಯುವವರ ಪ್ಲೇಟ್, ಚಮಚ ಸಾಸರ್‌ಗಳ ಕಟ, ಕಟ, ಕಟ್ ಶಬ್ದ. ಮಾತು ತಿರುಗಿಸಲು ಕಾಂತಿಯನ್ನು ಉದ್ದೇಶಿಸಿ—

'ಮಿಸ್ ಕಾಂತಿ ನೀವು ಇವತ್ತು ಚರ್ಚೆಯಲ್ಲಿ ಉತ್ಸಾಹ ತೋರಲಿಲ್ಲ. ನೀವು ಮೊದಲಿಂದ ಕೊನೆಯವರೆಗೂ ಬಹು ಸಪ್ಪೆಯಾಗೇ ಇದ್ದಿರಿ' ಎಂದೆ. ಹೌದು ನಾವೂ ಅದನ್ನು ಗಮನಿಸಿದೆವು ಎಂದು ಎಲ್ಲರೂ ಅಭಿಪ್ರಾಯಪಟ್ಟರು. ಕಾಂತಿ ಮಾತ್ರ ಹಾಗೇನಿಲ್ಲ ಎಂದು ಪಲಾಯನವಾದಿಯಾದಳು. ಹಾಗಾದರೆ ನಾಳೆ ಚರ್ಚೆಗೆ ಉತ್ಸಾಹಿಯಾಗಿ ಬರ್ತಿರಾ ಎಂದಿದ್ದಕ್ಕೆ ಹೌದು ಎಂಬಂತೆ ತಲೆಯಲ್ಲಾಡಿಸಿದಳು. ಅನಂತರ ಒಂದು ಸಲಹೆಯನ್ನು ಮುಂದಿಟ್ಟಳು : ನಾಳೆ ಚರ್ಚೆಗೆ ಬದಲಾಗಿ ಜೂಗೆ ಹೋಗಿಬರೋಣ. ಅದಕ್ಕೆ ಸಂಘದ ಎಲ್ಲರ ಸಮ್ಮತಿಯೂ ದೊರೆಯಿತು.

× × ×

ಮಾರನೆಯ ದಿನ ತರಗತಿ ಮುಗಿದ ನಂತರ ನಿನ್ನೆಯ ಸದಸ್ಯರೆಲ್ಲಾ ಸೇರಿ ಬಸ್ಸು ಹಿಡಿದು ಜೂಗೆ ಬಂದೆವು. ಪ್ರವೇಶವಾಗುತ್ತಿದ್ದ ಹಾಗೆಯೇ ಬುಸುಗುಟ್ಟುವ ಬೃಹದಾಕಾರದ ನಾಗಸರ್ಪಗಳ ದರ್ಶನ.

‘ಹಾವುಗಳು ಹೆಡೆಯನ್ನು ತೆಗೆದಾಗ ನೋಡಲಿಕ್ಕೆ ತುಂಬಾ ಆಕರ್ಷಕವಾಗಿರುತ್ತೆ’ ಎಂದಳು ವಿಜಿ.

‘ಅಷ್ಟೇ ಅಪಾಯಕಾರಿ’ ಎಂದೆ ನಾನು.

‘ಹಾವುಗಳನ್ನು ಕಾಮಕ್ಕೆ ಸಂಕೇತವಾಗಿ ಬಳಸುತ್ತಾರಲ್ಲ ಕಾವ್ಯದಲ್ಲಿ ಏಕೆ’ ಎಂದ ಮರಿ ಸೈಕಾಲಜಿಸ್ಟ್ ನಿಜು.

‘ಆಕರ್ಷಕ ಮತ್ತು ಅಪಾಯಕಾರಿ ಎಂಬುದಕ್ಕೆ ಇರಬೇಕು’ ರಾಣಿಯ ಉತ್ತರ. ‘ನವಿಲು ತುಂಬಾ ಆಕರ್ಷಕವಾಗಿದೆ’ ಎಂದು ಕಾಂತಿ ಅತ್ತಕಡೆ ಗಮನಸೆಳೆದಳು. ‘ಆಗೋ ಕಾಡು ಮನುಷ್ಯ’ ಎಂದು ಚಂದ್ರು ವೃತ್ತಾಕಾರದ ಸರಳುಗಳ ಮನೆಯ ಕಡೆ ಬೆರಳು ಮಾಡಿದ. ‘ಬನ್ನಿ ನಮ್ಮ ಪೂರ್ವಿಕರನ್ನು ನೋಡೋಣ’ ಎಂದು ಅಲ್ಲಿಗೆ ತರಾಯಿಸಿದೆವು. ಚಂದ್ರು ಅವುಗಳ ಬಗ್ಗೆ ವ್ಯಾಖ್ಯೆಯನ್ನು ಶುರು ಮಾಡಿದ— ‘ನಮಗೂ ಅವಕ್ಕೂ ಏನೂ ವ್ಯತ್ಯಾಸವಿಲ್ಲ, ಒಂದೆರಡು ಅಂಶಗಳ ಹೊರತಾಗಿ ಮೈತುಂಬ ಸೊಂಪಾಗಿ ಕೂದಲುಗಳು ಬೆಳೆದಿವೆ. ಇಲ್ಲಿರುವ ಈ ಎರಡರಲ್ಲಿ ಒಂದು ಗಂಡು ಒಂದು ಹೆಣ್ಣು. ಮುಖ ನಮ್ಮಂತೆಯೇ ಇದ್ದರೂ

ಉಬ್ಬಾಗಿದೆ ಅಷ್ಟೇ. ಅವಕ್ಕೂ ಬುದ್ಧಿಯಿದೆ. ಆದರೆ ನಮ್ಮ ಹಾಗೆ ಯೋಚನಾ ಶಕ್ತಿಯಿಲ್ಲ. ಅಲ್ಲದೆ.... ಅಲ್ಲದೆ.... ಅವುಗಳ ಇಂದ್ರಿಯಗಳೂ ಸಹ ನಮಗಿಂತ ಸ್ಥಳದಲ್ಲಿ ಹಾಗೂ ಆಕಾರದಲ್ಲಿ ಸ್ವಲ್ಪ ಭಿನ್ನ........’

ವ್ಯಾಖ್ಯೆ ಮುಂದುವರಿಯುತ್ತಿತ್ತು. ಗಂಡು ಹೆಣ್ಣಿನ ಹತ್ತಿರ ಬಂತು. ಅದರ ಮೈತಡವಿತು. ಕೂದಲನ್ನು ಹೆಕ್ಕಿ ಹೇನು ತಿಂದಿತು. ಹಾಗೆಯೇ ಇದ್ದಕ್ಕಿದ್ದಂತೆಯೇ ಹೆಣ್ಣಿನ ಹಿಂಭಾಗಕ್ಕೆ ಹೋಗಿ ಅದನ್ನು ಬಗ್ಗಿಸಿ, ಹೊಟ್ಟೆಯನ್ನು ಹಿಡಿದುಕೊಂಡು ಸಂಭೋಗಿಸಲು ಉಪಕ್ರಮಿಸಿತು.

ಚಂದ್ರುನ ವ್ಯಾಖ್ಯೆ ನಿಂತಿತ್ತು. ನನ್ನ ವ್ಯಾಖ್ಯೆ ಶುರುವಾಯ್ತು— ‘ಈ ಪ್ರಾಣಿಗಳಿಗೆ ಕಾಮ ಎಲ್ಲದರಂಥದ್ದು ಒಂದು ವಸ್ತು. ಅದನ್ನು ಅವು ಸ್ವತಂತ್ರವಾಗಿ ಸ್ವಚ್ಛಂದತೆಯಿಂದ ಹೇಗೆ ಬೇಕೊ ಹಾಗೆ ಬಳಸಿಕೊಳ್ಳುತ್ತವೆ. ನಮ್ಮ ಹಾಗೆ ಅದಕ್ಕೊಂದು ಅತಿಶಯ ಸ್ಥಾನವನ್ನು ಕೊಡುವುದಿಲ್ಲ.’

'ಯೆಸ್, ಯೆಸ್. ಒಂದು ರೀತಿಯಲ್ಲಿ ನಾವು ತಿಂದ ಹಾಗೆ, ಉಂಡಹಾಗೆ, ಉಗುಳಿದ ಹಾಗೆ, ಬೊಗಳಿದ ಹಾಗೆ, ಕೆಮ್ಮಿದ ಹಾಗೆ, ಕ್ಯಾಕರಿಸಿದ ಹಾಗೆ' ಎಂದ ನಿಜು.

'ಅತಿಶಯ ಸ್ಥಾನವನ್ನೂ ಕೊಟ್ರೆ ನಾವು ಜೀವನಾನ್ನ ಸೀರಿಯಸ್ಸಾಗಿ ತೆಗೊಳ್ಳೊದೇ ಇಲ್ಲ. ಕೇವಲ ಕಾಮದಲ್ಲೇ ನಿಂತು ಬಿಡ್ತೇವೆ ಅನ್ಸುತ್ತೆ ನಂಗೆ' ಎಂದ ಚಂದ್ರು.

'ಕರೆಕ್ಟ್. ಅದೊಂದೇ ಜೀವನದಲ್ಲಿ ಮುಖ್ಯ ಅಲ್ಲ. ಅದಕ್ಕೆ ನಾವು ಅಷ್ಟೊಂದು ಮಹತ್ವವನ್ನು ನಾವು ಕೊಡಬಾರದು. ಇದಕ್ಕೆ ನೀವೇನು ನೀವೇನು ಹೇಳ್ತೀರಾ ಮಿಸ್ ವಿಜಿ?'

ಅಕ್ಕಪಕ್ಕದಲ್ಲಿ ನೋಡಿದೆ. ತಿರುಗಿ ತಿರುಗಿ ನೋಡಿದೆ. ದೂರದಲ್ಲಿ ದೂರದಲ್ಲಿ ಅಲ್ಲಿ ಎಲ್ಲೋ ಒಂದು ಕಡೆ ವಿಜಿ ರಾಣಿ ಹಾಗೂ ಕಾಂತಿ ಜಂಕೆಮರಿಗಳ ಕುಣಿತ ಎಳೆತ ನೋಡುತ್ತಿದ್ದುದು ಕಾಣಿಸಿತು.

■ ■ ■

ಎಂ. ಎನ್. ಜೈ ಪ್ರಕಾಶ್

ಹನಿಗಳು

(Dedicated to the spirit of teen-ages)

೧

ಈ ಕಾಮಪುರದ ತುಂಬಾ
ಕಪ್ಪುಮಣ್ಣ ಹೊಲ.

೨

ಬಲಿತು ಜಿಗಿದ ಲತೆಗೆ
ಎದೆ ಬಿರಿಯುವ ಮೊಗ್ಗು.
ನಡಬಳುಕುವ ಮೊಗ್ಗು–ತುಟಿಗೆ
ಕಾದು ನಿಂತಿದೆ ಹಿಗ್ಗು.

೩

ಸಾಕು ನೀ ದೃಷ್ಟಿಯಲ್ಲಿ ಒಗೆದರೆ–
ಅಲಲಾ ! ಟೊಂಕದಲ್ಲಿ ನವಿರು
ಮೇಲೆ ಕಂಕುಳಲ್ಲಿ ಬೆವರು
ಉರುಟುರುಟು ಮೊಗ್ಗಿನ ಸುತ್ತ
ಮತ್ತೆ ರೋಮಾಂಚದ ಸಿಬಿರು !

೪

ಕದ್ದು ಕೆನೆಯ ಹಾಲುಂಡ ಗಿಣಿ
ರಾಮನ ಕೆಂಪು ಕೊಕ್ಕಿನಲ್ಲಿ–
ಬಿಂಬಾಧರದ ಮತ್ತು. ಅರರೆ,

ಗಂಡಸ್ಥಳದ ಸುತ್ತಾ
ಅಯ್ಯೊ ವ್ಯರ್ಥವಾಯ್ತು ಸೊಕ್ಕು.

೫

ಬಿಡೆ ಸಾಕು ನಿನ್ನ ಬಡಿವಾರ
ದ ಬಿಸಣಗಿತ್ತಿ ಬಿಂಕ. ತಾನೆ
ಇದೀಗ ನನ್ನ ನಿನ್ನ ರಕ್ತ ಸವಿದ
ಈ ದಿಟ್ಟ ಸೊಳ್ಳೆಯೊಳಗೆ ನೋಡಂ–
ಆಯಿತು ನಮ್ಮಿಬ್ಬರ ನಿಷೇಕ !

೬

ಕಾರ್ತೀಕದ ಈ ಹಣತೆ ಬೆಳಕಲ್ಲಿ
ನಾಗಸಂಪಿಗೆ ಮುಡಿದು ಬರಬೇಡ
ನಾಗವೇಣಿ: ಅಗ್ಗಿಷ್ಟಿಕೆಯು ನಿಗ್ಗಿ ನಿಗಿ
ನಿಗಿ ಕೆಂಡ ನನ್ನ ಗೆಲ್ಲಂವುದು !

೭

ಚಂದ್ರ
ನಾಡಿ ಹಿಡಿದಾಗ ಕಂಪಿಸಿ ಝಲ್
ಕಾಡಿನ ನಾಡಲ್ಲಿ ಬೆಳಗು.

೮

ಕೇತಕಿಯು ಹೂ ಮುಡಿದು ನಮ್ಮ ನೋಡುತ್ತ
ಬೇಲಿಸಾಲಿನ ಒಳಗೆ ನಗುವ ಕಾಮಾಕ್ಷಿಯರೆ,
ಗೊತ್ತುಂಟೆ ನಿಮಗೆ ?– ನಮ್ಮ ಹೊಟ್ಟೆ ಹೊಸ
ನೇಗಿಲಿಗೊಂದು ಹೊಲ ಬೇಕಾಗಿದೆ !

೯

ಹೀಗೆ ಈ ಹರೆಯದ ಹರೆಗೆ–
ಆಳಕ್ಕಿಳಿವ ಬೇರು ಬೇರಿಗೆ

ಕಾಂಡ ಕಾಂಡದ ಶಿಖೆಗೆ
ಟೊಂಗೆ ಟೊಂಗೆಗೆ ಮೈನೆರೆವ ಎಲೆ ಎಲೆ
ತುದಿಗೆ ಸದಾ ಚಿಗುರುವ ಹೂವು
ಹೂವಿಗೆ ಕಚ್ಚುವ ಮಿಡಿ ಮಿಡಿಗೆ
ಬಲಿವ ಕಾಯಿ ಕೆಂಪು ಹಣ್ಣು
ಹಣ್ಣಿಗೆ ಮುರುಕುವ ಹಸಿರು ಗಿಳಿ
ಕೊಕ್ಕು ಮಸೆಯುತಿರಲಿ ಚೈತ್ರ ಕಳೆದ ಮೇಲೂ....

■ ■ ■

ಜಿರನಹಳ್ಳಿ ಸಿದ್ದಪ್ಪ

ಗೋರಿ ಮೇಲಿನ ಕಾಗೆಗಳು

ಕವನ

ನೆಲದ ಜಾಡಿನ ಫಲಕ್ಕೆ ಧೂಳಾಗಿಸಿಕೊಂಡ ಹೆಜ್ಜೆಗಳು
ಹದ್ದುಮೀರಿದ ಅವಸರದ ಬದುಕು
–ತೊಡಕಲ್ಲಿ ಕುಂತೆ ಬೆರಳು ಮಡಚುತ್ತಾರೆ;
ಮಾರಿ ಮರಿಗೆ ಹೂವ್ವಸರ ಮಾಡಿ ಮಾಲೆ ಹಾಕಿ
ತಂಬಿಟ್ಟು ಆರತಿಗೆ ಸಣ್ಣು ಮಾಡಿ
ಕೊಬ್ಬಿದ ಕುರಿಯು ಹತ್ತುಹಲ ಮಂದಿಗೆ ಹಂಚಿಟ್ಟು
ಕೀಲುಂಬಿಡಿಸಿ ತಲೆಕಾಲ ಬೇಯಿಂಸಿ ಉಣ್ಣುತ್ತಾರೆ;
ಉಂಡು ಉಸಿರಾಡುತ್ತಾರೆ :
ಕಾಲಗರ್ಭದ ಸೋಂಕು ರೋಗಕ್ಕೆ ಇವರು ಸಿಕ್ಕಿ
ಇದರಿಂದಲೇ ಏನೋ ಸಾಯುದೇ ಒಟ್ಟೊಟ್ಟಿಗೆ
ಕರುಬಿ ಕರುಳಸರ ಮಾಲೆಗೆ ಕಸರೆ ಉಳಿಸೆ
ಮಲಗುತ್ತಾರೆ;
ಮಕ್ಕಳಾಗಿಸುತ್ತಾರೆ
ರಾತ್ರಿ ಸುಖಿಸುವುದಕ್ಕೆ ಹಗಲ ಹಗರಣಗಳ
ರಸತುಂಬಿ ಕಾಮಿಸುವ ಇವರ ಸ್ಖಲನವು
ಸಗಣಿ ಹುಳುಗಳಿಗಿಂತ ಮುಖ್ಯವಾಗುತ್ತವೆ
ಹುಟ್ಟಿದ ಕ್ರಿಮಿಕೀಟಗಳಿಗೆ ಅಮಾಸ್ಯೆದಿನ
ಕುರಿ ಕಸರೆ ಎರಚಿ ಮಂದೆ ಮೇಯಿಸುತ್ತಾರೆ.
ಇವು ಬೆಳೆದಂತೆ ಹಟ್ಟೀಲೆ ಮುಂದುವರಿದು
ತಿಟ್ಟ ಮ್ಯಾಲಿನ ಹಸಿರ ಹಂಚಿ ತಿಂದು

ಕೆಚ್ಚೆ ಬದುವಿನ ಕಡ್ಡಿ ಬರಲಿಂದ ಹೂವ್ವ
ಉದುರುವ ಮುನ್ನ ತುದಿ ತಿಂದು
ಹೊಟ್ಟೆ ತುಂಬಿಸಿ ಕೊಳ್ಳುತ್ತವೆ, ರಪ್ಪ ಹಾಕಿಕೊಳ್ಳುತ್ತವೆ.
ಕೊಬ್ಬಿರುವ ಕುರಿಗಳ ಕಟ್ಟಿಟ್ಟುಕೊಂಡು ಕತ್ತರಿಸುತ್ತಾನೆ
–ಉಳಿದವೆಲ್ಲವನ್ನು
ಮಾರಿಕೊಂಡವರ, ಕೊಂಡು ತಿನ್ನುವವರ ಮಧ್ಯವರ್ತಿಗೆಲ್ಲಾ
ಮೂಕವಾಗಿಯೆ ನಿಂತಿದೆ ಇಲ್ಲಿ.

ಹಟ್ಟಿ ತುಳಿದ ಜೋಯಿಸ, ಟಾರು ತುಳಿದು ಸಾಗುವಾಗ
ಈ ಕಸಾಯಿ ಅಂಗಡಿಯ ಕುರಿ ಕಂಡು ಗಹಗಹಿಸಿ ನಗುತ್ತಾನೆ.
ಸುಲುಂಭವಾಗುತ್ತಾನೆ;
ಅವನ ಬೊಜ್ಜು ನಡಿಗೆಯೊಳಗಿನ ಗಾಯತ್ರಿ ಜಪ
ಅವನುಳಿಸುತ್ತದೆ; ಬೆಳೆಸುತ್ತಿದೆ.
ಗಾ
ಯ
ತ್ರಿ
ಜಪದ ಮೇಲಿನ ಅರ್ಥಕಾಣದ
ಕುರಿಗಳು ಸೃಷ್ಟಿಲಯದ ಬಗ್ಗೆ
ಮಂಗ ಜನುಮದ ಪರಿಪರಿಯಲ್ಲಿ ಮಾತಾಡುತ್ತವೆ.
ಈ ಪರಿಚಲನೆಯು ರಕುತ, ಧಮನಿಗೆ ನಂಟು
ಮಾಡಿದ್ದಕ್ಕೆ ಮಂಕಾಗುವರು.
ಮನಸ್ಸಿಗೂ ಬದುಕಿಗೂ ಕ್ರಿಯೆಗೊಳಿಸದೆ
ಕರುಳಿಗೂ ಬದುಕಿಗೂ ಕಸರೆ ಬರಿಸುತ್ತಾರೆ
ಗಾಯತ್ರಿಯೊಳಗಿನ ಅರ್ಥಕ್ಕೆ ಕುರಿಯಾಗಿಸಿಕೊಳ್ಳುವ
ಕಸಾಯಿ ಅಂಗಡಿಯ ಸಾಬಿಯು ಮಚ್ಚು ಪಳಪಳಿಸುತ್ತದೆ.
ಅವಳ ಸೆರಗು ಹಾರಿಸುವ ಸಾಬಿ
ಮಧ್ಯವರ್ತಿಗಳ ಮರೆತು, ಜೋಯಿಸನ ಹೊಟ್ಟೆಗೆ
ಎಳೆನೀರೇ ಸಾಕೆನ್ನುತ್ತಾನೆ.

ಕರುಳ ಕಸರೆ ತುಂಬಿಸಿದ ಹಟ್ಟಿಯ ಜನ
ಕುರಿ ಕೊಬ್ಬಿಸಿ ಸಾಬಿಗೆ ಷಹಬಾಸ್ ಹೇಳುತ್ತಾರೆ.
ಜೋಯಿಸ ಹಳ್ಳಿ ನೆಲಕ್ಕು ಟಾರು ರಸ್ತೆಗೂ
ಮಧ್ಯದಲ್ಲೇ ಕಟ್ಟಿಟ್ಟುಕೊಂಡ ಕುರಿಯ ಬಗ್ಗೆ
ಚಿಂತಿಸುತ್ತಾನೆ.
ಈ ಕಟುಕರ ನಡುವಿನ ಕುರಿಗೆ ಟಗರು ಬಿಡುವುದರ
ಬಗ್ಗೆ ಸಗಣಿ ಹುಳುಗಳ ಹೋಲಿಸುತ್ತಾನೆ,

ಕುರಿ ಮಾರಿದವ, ಕೊಂಡವ, ಕೊಂದವ
ಎಲ್ಲ ಸತ್ತರೂ ಗೋರಿ ಮೇಲಿನ ಕಾಗೆಗಳು
ಅನ್ನಕ್ಕೆ ಕಾಯುತ್ತವೆ
ಜೋಯಿಸ ರುಚಿ ಕಾಣದೆ ನಿಲ್ಲಬಲ್ಲವೇನೋ ?

ಚಂದ್ರಶೇಖರ ತಾಳ್ಯ

ಆದರ್ಶ

ಮುಳ್ಳು ಕಳ್ಳಿಯ ಬೇಲಿಯಿಕ್ಕಟ್ಟಿನ
ಕಂದಾಚಾರದ ಈ ರಸ್ತೆಯಲ್ಲದಲ್ಲಿ
ಬಂಧಿಯಾದ ನಾನು ಯಾತಕ್ಕೆ ಬೇಕಾದವ ?

ಇದ ಕಿಮ್ಮನೆ ಕಿಸಿದು ಮೈಸಡಿಲಿಸಿ
ನಡೆವ ತಾಕತ್ತಿಲ್ಲದೆ ಹಲಿವಿಳಿಸಿಕೊಂಡು
ನೋಡದೆ, ನಡೆಯದೆ, ಆಡದೆ ಬರೀ ಮುಲುಗುತ್ತಿದ್ದೇನೆ.
ಮಲಗಿದಲ್ಲೇ ಕೀವಾಗಿ ಜಿನುಗುತ್ತಿದ್ದೇನೆ.

ಚರಿತ್ರೆಯ ಪುಟ ಸೀಳಬೇಕೆನ್ನುವ
ಚೌಕಟ್ಟು ಮೀರಬೇಕೆನ್ನುವ ಬಂಡಾಯದಲ್ಲಿ
ಪುಕ್ಕಲುಗುಬ್ಬಿಗೆ ಮತ್ತೆ ಗೂಡು ನಿರ್ಮಿಸುವ
ಹೊಸತನದಾರಂಭಶೂರತ್ವಕ್ಕೆ ನನ್ನ ತೊಡಗಿಸುವ
ಬರಿದೆ ಜಂಭಗಾರ, ಸೊಗಸುಗಾರ.
ಚುಚ್ಚಿ ಹಿಂಸಿಸುವೀ ಇಕ್ಕಟ್ಟು ಮುಳ್ಳುಬೀದಿಗಳಲ್ಲಿ
ಮೆಟ್ಟು ಹೊಲೆಯಲು ಹಾತೊರೆದು ಮೆಟ್ಟಾದ ನಾನು
ಬೀದಿಗಿಳಿಯಬಲ್ಲೆನೇ ? ಕೂಗು ಹಾಕಬಲ್ಲೇನೇ ?
ಛಳಿ ಕೊರೆಯುತ್ತಿದೆಯಲ್ಲವೇ ?
ನನಗೆ ಸದಾ ಡಿಸೆಂಬರಿನ ಅನುಮಾನ.
ರಗ್ಗು ಹೊದ್ದು ಬೆಚ್ಚಗೆ ಕೂತು ಬಿಸಿ ಕಾಫಿ ಕುಡಿದು
ಇವಳೆದೆಯ ಕಂಪಾರ್ಟಮೆಂಟಲ್ಲಿ ದಿನ ಕಳೆವುದಕ್ಕೆ
ಹುಟ್ಟಿದವನಿಗೆ
ದಿಗ್ಗನೆ ಆಕಾಶದಕ್ಷಯ ತಾರೆಗಳತ್ತ

ದಿಕ್ಚಕ್ರಗಳಳತೆಮೀರಿ ಪುಟಿವ ಬಯಕೆ—
ಒಮ್ಮೊಮ್ಮೆ ಹೀಗೆ ಹೊತ್ತುವುದು— ಆರಿ ಆದರ್ಶವಾಗುವುದು.

ಎಲ್ಲೆ ಬದುಕಿನ ಕಿಷ್ಕಿಂದೆಯಲ್ಲಿ
ನನಗೆ ಖುಷಿಯಾಗುತ್ತದೆ
ಇಡೀ ರಾತ್ರಿ ಮಾಡಿದ ಕ್ರಾಂತಿಯನೇಕ ವಿಚಾರಗಳ
ಗಟಾರಕ್ಕೆಸೆದು
ಚಿತ್ತವಿಕಾರಕ್ಕೆ ಮಣಿಸಿ
ಹಾಸಿಗೆ ಹಾಸಿ ಮೇಲೆ ಮಲಗಿಸಿ ಆಚಾರದ ಮೊಲೆಯುಣಿಸುತ್ತಿದೆ.

■ ■ ■

ದೇವೇಂದ್ರ ದೇಸಾಯಿ

ಯುವ ಲೇಖಕರ ಸಮಸ್ಯೆಗಳು

ವಿವೇಚನೆ

ಇಂದಿನ ಯುವ ಲೇಖಕರ ಸಮಸ್ಯೆಗಳನ್ನು ಕುರಿತು ಬರೆಯುವಾಗ ಚಾಲತಿಯಲ್ಲಿರುವ ಕನ್ನಡ ಸಾಹಿತ್ಯ ಪರಂಪರೆ ಯಾವುದು ? ನನ್ನ ವಾರಿಗೆಯ ಬರಹಗಾರರೆದುರಿಗೆ ಯಾವ ಯಾವ ನಮೂನೆ ಪಟ್ಟದ ದೇವರುಗಳಿದ್ದಾರೆ ? ಅವರ ಸಾಧನೆ, ಸಿದ್ಧಿಗಳ ವಾರಿ–ಕ್ವಾರಿಗಳೇನು ? ಮುಂತಾದ ಜರೂರಿ ಸಂಗತಿಗಳ ಮಾಹಿತಿ ತೀರಾ ಅವಶ್ಯ. ಏಕೆಂದರೆ ಈಗಾಗಲೇ ಎರಡು ತರಹದ ಸಾಹಿತ್ಯ ಸೃಷ್ಟಿ ನಮ್ಮ ಕಣ್ಣೆದುರಿಗಿದೆ. ಭಾವಗೀತೆ ಸಂಪ್ರದಾಯವಾಗಿ ಪರಿಣಮಿಸಿ, ಹಾಡಿದ್ದನ್ನೇ ಹಾಡುವ ಕಿಸಬಾಯಿದಾಸರ ಹಣೇಬರ ಪಡೆದಾಗ ಅಡಿಗರ ಹೊಸ ಹೊಡೆತದ ಕುರಹುಗಳು ಕಂಡವು. ಕೇವಲ ೨೫ ವರ್ಷಗಳಲ್ಲಿಯೇ ನವ್ಯಸಾಹಿತ್ಯ ಪರಂಪರೆ ಸಿದ್ಧ ಶೈಲಿಯಾಗಿ ಪರಿಣಮಿಸಿದೆ. ಅಡಿಗರೇ ಇಂದು ಪದ್ಯ ಬರೆದರೂ 'ಹಳೆಗಂಡಹೆಂಡರೊಡನಾಟ ಕೂಟದ ಚಟದ ತುರುಸು' ಎನ್ನಿಸುತ್ತಿದೆಯೆಂದು ಮುಲಾಜಿಲ್ಲದೆ ಹೇಳಬಹುದು. ಭಾವಗೀತೆಯ ಗೋಸುಂಬೆತನ ಕಂಡು ರೊಚ್ಚಿಗೆದ್ದು ಮೂದಲಿಸಿದ ಅಡಿಗರ ಈ ಮಾತು, ಈಗ ಅವರಿಗೇ ಅನ್ವಯಿಸುತ್ತಿರುವುದು ಒಂದು ಯೋಗಾಯೋಗ. ಮೊನ್ನೆ ಮೊನ್ನೆಯವರೆಗೂ ನವ್ಯಕಾವ್ಯದ ಕಣ್ವರೆಂದವರು ಹಳಮನೆಯ ಮಂದಿಯಾಗಿದ್ದಲ್ಲದೆ, ಒಂದು ಜನಾಂಗದ ಕಣ್ಣು ಮುಚ್ಚಿಸಿದವರೂ ಅವರೇ ಎಂಬ ಕೂಗು ಕೇಳುತ್ತಿದೆ. ಸವುಡು ಸಿಕ್ಕಾಗೊಮ್ಮೆ ಕಿರಿಯ ಕಂದಮ್ಮಗಳಿಗೆ ಮುನ್ನುಡಿಯ ಜೋಗುಳ ಹಾಡಿ ಹರಿಸುವುದರಲ್ಲಿಯೇ ಸ್ವರ್ಗಸುಖ ಅನುಭವಿಸುತ್ತಾರೆ. ಸೃಜನಕ್ರಿಯೆ ಹರಿಗಡಿದು ಹೋದುದಕ್ಕೆ ವಿಮರ್ಶಕ ತತ್ವಗಳನ್ನು ಪರಕೀಯರಿಂದ ಲಪಟಾಯಿಸಿ ಉದ್ದುದ್ದ ಭಾಷಣ ಬಿಗಿಯುತ್ತಿದ್ದಾರೆ. ಅದರಲ್ಲೂ ಕೆಲವರು ವಿವಿಧ ಮಾಧ್ಯಮಗಳಿಗೆ ತಮ್ಮನ್ನು ಅಭಿವ್ಯಕ್ತಗೊಳಿಸಿ

ಕೊಳ್ಳುವಿಕೆಯಲ್ಲಿ ಹೋರಾಟ ನಡೆಸಿದ್ದಾರೆ. ಉದಾ : ಪಾಟೀಲ, ಲಂಕೇಶ (ನಾಟಕ) ಪಟ್ಟಣಶೆಟ್ಟಿ, ಆಲನಹಳ್ಳಿ (ಕಥೆ, ಕಾದಂಬರಿ). ಅಡಿಗ, ಲಂಕೇಶ, ಕಣವಿ, ಶಿವರುದ್ರಪ್ಪ, ಪಾಟೀಲ, ಪಟ್ಟಣಶೆಟ್ಟಿ ಮುಂತಾದವರ ತಲೆಮಾರಿನ ತರುವಾಯ ಇಲ್ಲಿಯ ವರೆಗೂ ಕನ್ನಡದಲ್ಲಿ ಹೇಳಿಕೊಳ್ಳುವಂತ ಕೃತಿಬರಲು ಸಾಧ್ಯವಾಗಲಿಲ್ಲವೇಕೆ ? ಹಾಗಾದರೆ ನಮ್ಮಪರಂಪರೆಗೆ 'ಕೊಡುವ' ಸಾಧ್ಯತೆಗಳು ಬತ್ತಿಹೋಗಿವೆಯೇ ? ಕಾರಣ ಹುಡುಕುವುದು ನನ್ನ ಲೇಖನದ ಪ್ರಯತ್ನ.

ವೈಕುಂಠದ ದಾರಿಹಿಡಿದ ನಮ್ಮಕಾವ್ಯದ ಬಾಲಕ್ಕೆ ಜೋತುಬಿದ್ದ ನನ್ನ ವಾರಿಗೆಯ ಕವಿಗಳ ಹಣೇಬರ ಹೇಳತೀರದು. ಅತ್ತ ಭಾವಗೀತ ಸಂಪ್ರದಾಯದ ವಹಿವಾಟೂ ಇಲ್ಲ; ಇತ್ತ ನಮ್ಮಪರಂಪರೆಯ ತರಬೇತೂ ಇಲ್ಲ. ಕೆಲವರಂತೂ ರಾಮಾನುಜನ್‌ರ ಬೆನ್ನುಹತ್ತಿ, ಅವರ ಭಾಷಿಕ ಕಸರತ್ತನ್ನು ಸಾಧಿಸಲಾರದೆ ಪೇಚಿನಲ್ಲಿ ಸಿಕ್ಕಿದ್ದಾರೆ. ಇದನ್ನು ಗಮನಿಸಿಯೇ 'ಮುಕ್ತ' ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಶಾಂತಿನಾಥ ದೇಸಾಯಿಯವರು "ಇಂದಿನ ಯುವ ಕವಿಗಳನ್ನು, ಕವಿಗಳು ಹೌದೋ ಅಲ್ಲೋ ಎಂದು ನಿರ್ಧರಿಸುವುದು ಅತ್ಯಂತ ಜರೂರಾಗಿದೆ. ಏಕದಮ್ ನಾಲ್ಕೈದು ಕವನಗಳನ್ನು ಒರೆದು ತಾವು ನವ್ಯ ಕವಿಗಳೆಂದು ಹೇಳುತ್ತಾ ಕಾವ್ಯದ ಸ್ವಾಸ್ಥ್ಯವನ್ನು ಹದಗೆಡಿಸಿದ್ದಾರೆ" ಎಂದು ಹೇಳಿದಂತಿದೆ.

ಇಷ್ಟೆಲ್ಲಾ ಮಾತುಗಳನ್ನು ಏಕೆ ಹೇಳುತ್ತೇನೆಂದರೆ, ಕಾವ್ಯವೂ ಒಂದು ಕಲೆ. ಅದಕ್ಕೂ ತನ್ನದೇ ಆದ ಒಂದು ಪರಂಪರೆ ಇರುವುದರಿಂದ ಕವಿಯಾದವನಿಗೆ, ಭಾಷಾಮಟ್ಟದಲ್ಲಿಯಾದರೂ ಪರಂಪರೆಯ ಪ್ರಜ್ಞೆ ಅವಶ್ಯ. "ಒಂದು ಕಾವ್ಯ ಸಂವೇದನೆಯಿಂದಲೇ ಮತ್ತೊಂದು ಸಂವೇದನೆ ಬೆಳೆಯುತ್ತಿದೆ. ಇಂದು ನಾನು ಬರೆಯುವ ಕಾವ್ಯ, ಹಿಂದಿನ ಎಲ್ಲ ಕಾವ್ಯಗಳ, ನಾನು ಓದಿದ ಮತ್ತು ಓದಿಲ್ಲದ ಸಮಗ್ರತೆಯ ಶಿಶು" ಆದರೆ ಇಂದಿನ ಅನೇಕ ಲೇಖಕರು ಕನ್ನಡ ಭಾಷೆಯ ಗಂಧವಿಲ್ಲದಿದ್ದರೂ ಭಾರತ ಮಟ್ಟದ ಕೀರ್ತಿಯನ್ನು, ಹೊರಲಾರ ದಂಥ ಬಿರುದು ಬಾವಲಿಗಳನ್ನು ಪಡೆದುದು ಹೊಸ ಸಾಹಿತ್ಯ ರಚನೆಗೆ ಹಳೆ ಪರಂಪರೆ ಅವಶ್ಯವಿಲ್ಲವೆಂಬ ತಪ್ಪುದಾರಿಯನ್ನು ತೋರಿಸಿದ್ದಾರೆ. ಉದಾ : ಗಿರೀಶ ಕಾರ್ನಾಡರಿಗೆ ಯಾವ ಪರಂಪರೆ ಇತ್ತು ? ಆದರೂ ಅವರನ್ನು ಇಂದು

ಕನ್ನಡದ ಬಹುದೊಡ್ಡ ಲೇಖಕರೆಂದು ಪರಿಗಣಿಸಿದ್ದಾರಲ್ಲ? ಪರಂಪರೆಗೆ ಪರಕೀಯರಾದ ಗಿರೀಶ ಕಾರ್ನಾಡರಿಗೆ ಯಾವ ಪರಂಪರೆ ಇತ್ತು? ಪರಂಪರೆಗೆ ಪರಕೀಯರಾದ ಗೀರಿಶ ಕಾರ್ನಾಡರು ಮೂರು ನಾಟಕಗಳನ್ನು ಬರೆದು, ಈಗ ತ್ರಿಶಂಕು ಸ್ಥಿತಿಯಲ್ಲಿ ಬಂದು ನಿಂತಿದ್ದಾರೆ. ಚಲನ ಚಿತ್ರ ಮಾಧ್ಯಮಕ್ಕೆ ತಿರುಗಿದ್ದು ನಾಟಕದಲ್ಲಿ ಅವರು ಸೋತಿದ್ದನ್ನು, ಅವರ ಪರಂಪರೆಯ ಪರಕೀಯತೆಯನ್ನು ತೋರಿಸುತ್ತಿದೆಯೆ? ಈ ಸೋಲನ್ನು ಬಣ್ಣ ಕೊಟ್ಟು ಸಮರ್ಥಿಸುವ, ಪ್ರಚಾರ ಕೊಡುವ ಬ್ರಾಹ್ಮಣ, ಅಬ್ರಾಹ್ಮಣ ವಿಮರ್ಶಕರೂ ಇದ್ದಾರೆ. ಇದನ್ನು ಅರ್ಥಮಾಡಿಕೊಂಡು ಈಗಿನ ಲೇಖಕರು ಕೊಡುವ ಪ್ರತಿಕ್ರಿಯೆ ಹೇಗಿದೆಯೋ ಕಾಯ್ದು ನೋಡಬೇಕಾಗಿದೆ. ಮತ್ತೊಂದು ಸಂಗತಿಯನ್ನು ನಾವು ಇಲ್ಲಿ ಗಮನಿಸುವುದು ಜರೂರಾಗಿದೆ. ಪರಂಪರೆಯ ಪ್ರಜ್ಞೆ ಎಂದಾಕ್ಷಣ ಪಂಪನವೋ ಕುಮಾರವ್ಯಾಸನವೋ ಹರಿಹರನವೋ ಸಾಲುಗಳನ್ನು ಪೋಣಿಸುವುದಲ್ಲ; ಮನಮೋಹಕಗೊಳಿಸುವ ಪಾಂಡಿತ್ಯ ಪ್ರದರ್ಶನ ವಲ್ಲ; ತಮ್ಮನ್ನು ತಾವೇ 'ನಡೆದಾಡುವ ವಿಶ್ವಕೋಶ'ವೆಂದು ಡಂಬ ಚಪ್ಪರಿಸಿ ಕೊಳ್ಳುವ ಹುಂಬತನವೂ ಅಲ್ಲ. ಇಂದು ಪಂಪ, ಕುಮಾರವ್ಯಾಸ ಮುಂತಾದ ಹಳೆಗನ್ನಡ ಕವಿಗಳನ್ನು ಓದದೆಯೂ ಬೆಲೆಬಾಳುವ ಸಾಹಿತ್ಯ ರಚನೆ ಮಾಡಬಹುದು. 'ಭಾವಗೀತೆ' 'ನವ್ಯಕಾವ್ಯ' ಅಭ್ಯಾಸ ಮಾಡಿದರೂ ಸಾಕು. ಉತ್ತಮ ಕಾವ್ಯ ರಚಿಸುವ ಸಾಧ್ಯತೆ ಸಾಕಷ್ಟಿದೆ.

ಕನ್ನಡ ಕಾವ್ಯ ಪರಂಪರೆಯನ್ನು ದಕ್ಕಿಸಿಕೊಳ್ಳುವುದು ಸಮಸ್ಯೆಯಾದಂತೆ ಅನುಭವ, ಸಂವೇದನೆಯ ದೃಷ್ಟಿಗಳಿಂದಲೂ ಯುವಕರು ವಿಪರೀತ ಸಮಸ್ಯೆಗಳನ್ನು ಎದುರಿಸಬೇಕಾಗಿದೆ. ಅದು ಭಾರತದ ಜಾತಿ ಪದ್ಧತಿ. ವರ್ಣವ್ಯವಸ್ಥೆಯ ಮೇಲೆ ಕಟ್ಟಿದ ನಮ್ಮ ಸಮಾಜ ವ್ಯವಸ್ಥೆಯಲ್ಲಿ ಎರಡು ದೊಡ್ಡ ಸಂಸ್ಕೃತ, ಸಮಾಜಗಳ ನಿರ್ಮಾಣವಾಗಿದೆ— ಬ್ರಾಹ್ಮಣ ಹಾಗೂ ಶೂದ್ರ. ಒಂದು ಸಮಾಜವು ಅಭಿವೃದ್ಧಿ ಹೊಂದಬೇಕಾದರೆ ಅದು ತನ್ನಲ್ಲಿರುವ ಎಲ್ಲಾ ಯೋಗ್ಯ ಮತ್ತು ಸಮರ್ಥರಾದ ಜನರು ಸಂಪೂರ್ಣ ಉಪಯೋಗವನ್ನು ಪಡೆದುಕೊಳ್ಳಬೇಕು. ಆದರೆ ಜಾತಿ ಪದ್ಧತಿಯ ಸಮಾಜದಲ್ಲಿ ಅನೇಕ ಜನರಿಗೆ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಕೆಲಸ ಮಾಡಲು ಅವಕಾಶ ದೊರೆಯುವದಿಲ್ಲವಾದ

ಕಾರಣ ಅಷ್ಟರ ಮಟ್ಟಿಗೆ ಸಮಾಜದ ಬೆಳವಣಿಗೆಯು ತಡೆಯಲ್ಪಡುತ್ತದೆ. ಒಂದು ರಾಷ್ಟ್ರದಲ್ಲಿ ಒಮ್ಮನಸ್ಸಿನ ಒಕ್ಕಟ್ಟಿರಬೇಕಾದರೆ ವಿವಿಧ ರೂಪದ ಜನರು ಒಂದು ಬಲೆಯಲ್ಲಿ ಹೆಣೆದಂತಿದ್ದು ಸಮಾಜವು ಸಮರೂಪ (Homogeneous) ದ್ದಾಗಿರಬೇಕು. ರೋಮ್ ದೇಶವು ತನ್ನಲ್ಲಿದ್ದಂತಹ ಪ್ಲೆಬಿಯನ್ ಮತ್ತು ಪೆಟ್ರಿಶಿಯನ್ ಪಂಗಡಗಳೊಳಗಿನ ಭಿನ್ನತೆ ಮಾಯವಾದೊಡನೆ ಅತಿ ಉನ್ನತ ಸ್ಥಾನವನ್ನು ಪಡೆಯಿತು. ಇದಕ್ಕೆ ಪ್ರತಿಯಾಗಿ ಗ್ರೀಕ್ ಜನರು ತಮ್ಮ ಪಂಗಡಗಳಲ್ಲಿ ಐಕಮತ್ಯವಿಲ್ಲದೆ ತಮ್ಮ ಶತ್ರುಗಳೊಡನೆ ಏಕಭಾವದಿಂದ ಹೋರಾಡಲು ಸಾಧ್ಯವಾಗದೆ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳಬೇಕಾಯಿತು. ಇಂಗ್ಲಂಡ್ ದೇಶದಲ್ಲಿಯಾದರೂ ಅಲ್ಲಿಯ 'ಎಸ್ಟೇಟ್ ಸಿಸ್ಟಮ್' (estate system) ಎಂಬ ಜಾತಿ ಪದ್ಧತಿಯು ನಿರ್ಬಂಧ ರಹಿತ ವರ್ಗ ಪದ್ಧತಿಯಾದಾಗ ಬ್ರಿಟಿಷ್ ಚಕ್ರಾಧಿಪತ್ಯದ ಸ್ವರ್ಣಯುಗವು ತಲೆದೋರಿತು. ಈಗ ನಮ್ಮ ದೇಶವನ್ನೇ ತೆಗೆದು ಕೊಂಡರೆ ಕೇವಲ ಕೆಲವು ಜನ ಸಂಸ್ಕೃತಿಯ ನೇತಾರರಾಗಿದ್ದುದು, ಬಹುಪಾಲು ಜನ ನಿರಕ್ಷರಸ್ತರಾಗಿದ್ದು, ತಮ್ಮ ಸೃಜನ ಕ್ರಿಯೆ ಶಕ್ತಿಯನ್ನೆಲ್ಲಾ **manual labour** ದಲ್ಲಿ ವ್ಯಯಿಸಿದ್ದು ಗೋಚರಿಸುತ್ತಿದೆ. ವರ್ಗಪ್ರಧಾನವಾದ ರಾಷ್ಟ್ರದಲ್ಲಿ ಹುಟ್ಟಿದ ಲೇಖಕ ತನ್ನ ಸ್ವಸಾಮರ್ಥ್ಯದಿಂದ ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಸೇರಲು ಬಹುದು. ಹೀಗಾಗಲು ಸಾಧ್ಯವಿರುವದರಿಂದ ಆತನ ಅನುಭವಗಳ ಕ್ಷಿತಿಜ ವಿಸ್ತಾರವಾಗುವುದರಲ್ಲಿ ತೊಂದರೆಯಿಲ್ಲ. ಆದರೆ ಭಾರತ ದೇಶದಲ್ಲಿ ಒಂದು ವರ್ಣದಲ್ಲಿ ಹುಟ್ಟಿದರೆ ಮುಗಿಯಿತು. ಅವನು ಕುಣಿ ಕಾಣುವ ವರೆಗೂ ಅದೇ ಜಾತಿಯ ವಲಯದಲ್ಲಿ ಗಿರಕಿ ಹೊಡೆಯುತ್ತಾ ನಡೆಯಬೇಕು. ವರ್ಗಸಮಸ್ಯೆಯನ್ನು ಸಮರ್ಥವಾಗಿ ಚಿತ್ರಿಸಿದ ಗಾರ್ಕಿಯ 'ಮದರ್' ಕಾದಂಬರಿಯಂಥ ಕೃತಿಯಾಗಲೀ, ವರ್ಗ, ವರ್ಣಗಳನ್ನು ಮೀರಿನಿಂತು ಇಡೀ ಜನಾಂಗದ ಸಾವಯವ ಸಮಷ್ಟಿಯ ನೋವು, ನಿರಾಶೆ, ಭೀಭತ್ಸತೆಯನ್ನು ಕಂಡರಿಸಿದ ಎಲಿಯಟ್‌ನ 'ವೇಸ್ಟ್‌ಲ್ಯಾಂಡ' ದಂಥ ಉನ್ನತ ಕಾವ್ಯವಾಗಲೀ ಕನ್ನಡದಲ್ಲಿ ಮೂಡಿಬರಲಿಲ್ಲ. ಕನ್ನಡ ಸಾಹಿತ್ಯ ಪರಂಪರೆಯೇ ಹುಸಿ ವೈದಿಕ ಸಂಸ್ಕೃತಿಯಿಂದ ಸಂವೇದನೆ ಪಡೆದುದಕ್ಕಾಗಿ ಜನಸಾಮಾನ್ಯರ ಮನಸ್ಸಿನ ಅಭಿವ್ಯಕ್ತಿಯಾಗಲಿಲ್ಲ. ಪಂಪ ವೈದಿಕ ರಾಜನ ಅಪ್ಪಣೆಯ ಮೇರೆಗೆ ಮಹಾಭಾರತವನ್ನು ಬರೆದನಾದರೂ ಸಮಕಾಲೀನ

ಬಹುಪಾಲು ಜನತೆಯ ನೈಜ ಚಿತ್ರಣ ಕೊಡಲಿಲ್ಲ. ಮಹಾಭಾರತದ ಪಾತ್ರಗಳೆಲ್ಲಾ ಆತನ ಕಾಲಕ್ಕಾಗಲೇ ಮೂರ್ತಸ್ವರೂಪ ತಾಳಿದ್ದವು. ರೆಡಿಮೇಡ್ ಪಾತ್ರಗಳನ್ನು ಎತ್ತಿಕೊಂಡು ಅರಿಕೇಸರಿಯನ್ನು ಹೊಗಳಲು ಕಾವ್ಯ ವಾಹಕವಾಯಿತು. ಸಮಗ್ರ ಜನತೆಯ ಅಭಿವ್ಯಕ್ತಿಯಾಗಬೇಕಿದ್ದ ಕಾವ್ಯ ರಾಜರ, ವೈದಿಕರ ಹೊಗಳು ಭಟ್ಟಂಗಿಯಾಯಿತು. ಆದಾಗ್ಯೂ ಪಂಪ ನಮಗೆ ಕೆಲವೊಂದು ದೃಷ್ಟಿಯಿಂದ ಮಹತ್ವದ ಕವಿಯಾಗುತ್ತಾನೆ. ತಾನು ವೈದಿಕ ದೊರೆಯನ್ನು ಹೊಗಳುತ್ತಿದ್ದಾಗ್ಗೂ ಶೂದ್ರಜನಾಂಗದ ಪ್ರತಿನಿಧಿಯಂತಿದ್ದ ಕರ್ಣನ ಮೇಲೆ ಅಪಾರಪ್ರೀತಿ. ಶೂದ್ರನ ಗುಣ, ಶೌರ್ಯ, ತ್ಯಾಗ, ಸ್ವಾಮಿನಿಷ್ಠೆಗಳನ್ನು ವರ್ಣಿಸಿ ಇಡೀ ಸಮಾಜ ವ್ಯವಸ್ಥೆಯ ವಿರುದ್ಧವೇ ಶೂದ್ರ ಬಂಡೇಳುವಂತೆ ನುಡಿಸಿದ್ದು ಆಗಿನ ಸಂದರ್ಭದಲ್ಲಿ ಹಗುರಾದ ಮಾತಲ್ಲ. ವೈದಿಕ ಮರಿಗಳು ಆರ್ಯಸಂಸ್ಕೃತಿಯ ಪಟ್ಟಭದ್ರರಾದರೆ, ಕರ್ಣ ಶೂದ್ರನಾಗಿ ದ್ರಾವಿಡ ಸಂಸ್ಕೃತಿಯ ಫಲವಾಗಿ ಭೀಷ್ಮರ ಪಟ್ಟವನ್ನೇ ಪ್ರಶ್ನಿಸುತ್ತಾನೆ. ಶೂದ್ರನಿಗೇಕೆ ಪಟ್ಟವೆಂದು ಅಶ್ವತ್ಥಾಮ ಮುಂತಾದವರು ಮೂದಲಿಸಿದಾಗ ಕರ್ಣ ಹೇಳುವ ಮಾತುಗಳು :

> ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ? ನಿಮ್ಮ ಕುಲಂಗಳಾಂತು ಮಾ
> ರ್ಮಲೆವನನಟ್ಟಿ ತಿಂಬುವೆ ? ಕುಲಂ ಕುಲಮಲ್ತು, ಛಲಂ ಕುಲಂ,
> ಗುಣಂ ಕುಲಮಭಿಮಾನಮೊಂದೆ ಕುಲಮಣ್ಮು ಕುಲಂ, ಬಗೆವಾಗಳೀಗಳೀ
> ಕಲಹದೊಳಣ್ಣ, ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ

ಇದೇ 'ಮಹಾಭಾರತ'ದ ವಿಷಯವನ್ನು ತೆಗೆದುಕೊಂಡು ಕಾವ್ಯರಚಿಸಿದ ಕುಮಾರವ್ಯಾಸನ 'ಗದುಗಿನ ಭಾರತ' ಹರಿಸ್ತುತಿಯಲ್ಲೆ ತುಂಬಿಹೋಗಿದೆ. ಒಂದು ವಸ್ತು ವೈದಿಕ, ಅವೈದಿಕ ಕವಿಗಳಲ್ಲಿ ಯಾವ ಯಾವ ರೂಪ ತಳೆಯುತ್ತದೆ ಎನ್ನುವುದಕ್ಕೆ ಕುಮಾರವ್ಯಾಸ, ಪಂಪರೇ ಸಾಕ್ಷಿ. ಒಂದು ವೇಳೆ ಪಂಪನ ತಂದೆ ಮತಾಂತರ ಹೊಂದದೇ ಹೋಗಿದ್ದರೆ ವೈದಿಕ ಕವಿಯಿಂದ ಪಂಪಭಾರತದಂಥ ಕಾವ್ಯ ಹುಟ್ಟುತ್ತಿರಲಿಲ್ಲ. ಇದರಂತೆ ಬಸವಣ್ಣನವರು ಹುಸಿವೈದಿಕ ಸಂಸ್ಕೃತಿಯ ಕಪಿಮುಷ್ಟಿಯಿಂದ ಪಾರಾಗಿ ಬಂದು ಶೂದ್ರಬದುಕಿನೊಂದಿಗೆ ಮೇಳಗೂಡಿ, ಅವರ ಅಜ್ಞಾನ, ಮೂಢನಂಬಿಕೆ, ವೈದಿಕರ ಬಗ್ಗೆ ಇರುವ ಸ್ವಾಮಿನಿಷ್ಠೆ

ಬಿಡಿಸಲು ದೊಡ್ಡ ಹೋರಾಟ ಮಾಡಬೇಕಾಯಿತು. ಜೀವನದ ಅರ್ಥವನ್ನು ಶೋಧಿಸುವ ಬೆಲೆಕಟ್ಟುವ ಪ್ರಯತ್ನದಿಂದಾಗಿ ವಚನ ಸಾಹಿತ್ಯಕ್ಕೆ ಅದ್ಭುತ ಬೆಲೆಬಂದಿದೆ. ಕನ್ನಡದ ಉತ್ತಮ ಸಾಹಿತ್ಯ ಬಂದುದು ಬ್ರಾಹ್ಮಣವಿರೋಧ ದಿಂದವೆಂಬುದು ಐತಿಹಾಸಿಕ ಸತ್ಯ.

ನವ್ಯಸಾಹಿತ್ಯದ ಉದಾಹರಣೆ ತೆಗೆದುಕೊಂಡು ಇನ್ನಷ್ಟು ಸ್ಪಷ್ಟಪುರಾವೆಗಳನ್ನು ಕೊಡುತ್ತೇನೆ. ಅಡಿಗ, ಲಂಕೇಶ, ಕಣವಿ, ಶಿವರುದ್ರಪ್ಪ, ಪಾಟೀಲ ಇವರ ಕಾವ್ಯಗಳನ್ನು ಅಭ್ಯಾಸಮಾಡಿದರೆ : ನಿಜವಾದ ಮಣ್ಣಿನವಾಸನೆಯ ಕಾವ್ಯ ಬಂದದ್ದು ಅವೈದಿಕರಿಂದ. ಅನುಭವದ ಕೊರತೆ ಇರುವ ಅಡಿಗರು, ತಮ್ಮ ಸಂವೇದನೆ, ಪ್ರೇರಣೆಗಳಿಗಾಗಿ ವೇದ, ಉಪನಿಷತ್ತುಗಳನ್ನು ಆಶ್ರಯಿಸುತ್ತಾರೆ. ವರ್ತಮಾನದ ಬದುಕಿನ ವಸ್ತುಗಳು ಅವರಿಗೆ ಪ್ರೇರಣೆ ನೀಡಿಲ್ಲ. ಭೂತ. ರಾಮನವಮಿಯ ದಿವಸ ಇತ್ಯಾದಿ. ಅವರ 'ಭೂತ' ಪದ್ಯವನ್ನು ಬ್ರಾಹ್ಮಣ ರಾದ ಅನಂತಮೂರ್ತಿಯವರು ವಿವಿಧ ಸ್ತರಗಳಲ್ಲಿ ಅರ್ಥಮಾಡಿಕೊಳ್ಳುತ್ತಾರೆ, ಆದರೆ ತೇಜಸ್ವಿಯಂಥವರಿಗೆ ಅರ್ಥವಾಗುವುಲ್ಲವೆನ್ನುವುದು ಅಡಿಗರು ಉಪ ಯೋಗಿಸುವ ವೈದಿಕ ಪ್ರತಿಮೆಗಳ ಕ್ಲಿಷ್ಟತೆಯಿಂದ. ಅದಕ್ಕೆ ಬದಲಾಗಿ ಸಾಂಸ್ಕೃತಿಕ ವಾಗಿ ಮಹತ್ವವಾಗಿ ನಿಲ್ಲಬಲ್ಲ ಕೃತಿರಚಿಸಿದವರು ಲಂಕೇಶ, ಪಾಟೀಲ, ಶಿವ ರುದ್ರಪ್ಪ ಹಾಗೂ ಕಣವಿ. ಬ್ರಾಹ್ಮಣ ಹಾಗೂ ಶೂದ್ರಪ್ರಜ್ಞೆ ಭಿನ್ನಭಿನ್ನವಾಗಿ ಕೆಲಸಮಾಡಿದ್ದು ಕುವೆಂಪುರವರ 'ಕಾನೂರ ಸುಬ್ಬಮ್ಮ ಹೆಗ್ಗಡಿತಿ' ಮತ್ತು ಅನಂತಮೂರ್ತಿಯವರ 'ಸಂಸ್ಕಾರ' ಕಾದಂಬರಿಗಳಲ್ಲಿ. ಶಿವರಾಮ ಕಾರಂತರ 'ಚೋಮನ ದುಡಿ', ಭೈರಪ್ಪನವರ 'ದಾಟು', ಅನಂತಮೂರ್ತಿಯವರ 'ಭಾರತೀಪುರ' ಅನುಭವದ ಮಟ್ಟದಲ್ಲಿ ಹುಸಿ ಚಿತ್ರಗಳಾಗಿದ್ದು, ದಕ್ಕಲಾರದ ಅನುಭವಗಳಿಗೆ ತೆಕ್ಕಿಬಿದ್ದು ಸೋತಿದ್ದಾರೆ. ಅಮೇರಿಕೆಯ ನಿಗ್ರೋ ಬರಹಗಾರ ತನ್ನ ಪಾಡನ್ನು;

> Bewildered we are, and passion - tost; mad with the madness of a mobbed and mocked and murd_ ered people– straining at the armposts of Thy Throne. We raise our shacked hands and charge

Thee God, by the bones of our stolen fathers, by the tears of our dead mothers, by the very blood of ours : What meaneth this ? Tell us the plain, give us the sign. Keep not thou silence.

Sit no longer blind, God, deaf to our prayer and dumb to our dumb suffering. Surely Thou too art not white.

ಈ ರೀತಿ ತೋಡಿಕೊಂಡಿದ್ದು ಕನ್ನಡ ಕಾವ್ಯ ಪರಂಪರೆಯಲ್ಲೇ ಇಲ್ಲ. ಸಾವಿರ ವರುಷದ ಇತಿಹಾಸದಲ್ಲಿ ಕನ್ನಡ ಶೂದ್ರಾತಿಶೂದ್ರ ಸಾಹಿತಿಯೊಬ್ಬನೂ ಇಲ್ಲವೆಂದಾಗ ಜಾತಿಪದ್ಧತಿ ಎಷ್ಟು ಕ್ರೂರವಾಗಿತ್ತೆಂಬುದು ಕಲ್ಪನಾತೀತ. ಅಕ್ಷರಜ್ಞಾನ ಕೆಲವರ ಸೊತ್ತಾಗಿದ್ದ ಸಮಯದಲ್ಲಿ ಹರಿಜನ ಲೇಖಕ ಹುಟ್ಟುವುದು ಹೇಗೆ ಸಾಧ್ಯ. ಕುವೆಂಪುರಂಥ ಮಹಾಲೇಖಕನನ್ನೇ ಕಬಳಿಸಲು ಯತ್ನಿಸಿದ ವೈದಿಕ ಲೇಖಕರು ಉಳಿದವರಿಂದ ಸಾಹಿತ್ಯ ಸೃಷ್ಟಿ ಮಾಡಲು ಅವಕಾಶ ಕೊಡುತ್ತಿದ್ದರೆ? ಬ್ರಿಟಿಶರ ಪುಣ್ಯದಿಂದಲಾದರೂ ಕೆಲವು ಜನ ಶೂದ್ರರಿಗೆ ಅಕ್ಷರಜ್ಞಾನ ದೊರೆತಿದ್ದು ಮಹತ್ವವಾದದ್ದು. ಮತ್ತೊಂದು ಮೋಜಿನ ಸಂಗತಿಯೆಂದರೆ; "ನಾಡಿನ ಭಾಷೆಯ ಸತ್ವಕ್ಕೆ ಮತ್ತು ಜಾನಪದ ಸಂಸ್ಕೃತಿಗೆ ಹುಟ್ಟಿನಿಂದ ಮತ್ತು ಶಿಕ್ಷಣದಿಂದ ಹೊರಗಾಗುತ್ತ ಹೋದುದು ಲೇಖಕನಾದ ನನಗೆ ಸ್ವಂತ ಜೀವನದಲ್ಲಿ ಅತ್ಯಂತ ಸಂಕಟದ ಪರಕೀಯತೆಯ ಅನುಭವವಾಗಿದೆ....... ನಾನು ನಮ್ಮ ಸಮಾಜದ ವರ್ಣಭೇದ ನೀತಿಯನ್ನು ದಕ್ಷಿಣ ಆಫ್ರಿಕಾದ ಅಪಾರ್ಥೈಡ್ ಧೋರಣೆಯನ್ನು ಎಷ್ಟು ಹೇಸಿಗೆಯಿಂದ ಕಾಣುತ್ತೇನೋ, ಅಷ್ಟೇ ಹೇಸಿಗೆಯಿಂದ ಮತ್ತು ಕ್ರೋಧದಿಂದ ಕಾಣುತ್ತೇನೆ. ಲೇಖಕನಾದ ನನಗೆ ವರ್ಣ ವಿಂಗಡಣೆಯಿಂದಾಗಿ ನನ್ನ ಅನುಭವದ ಲೋಕವೇ ಸಂಕುಚಿತವಾಗಿದೆ ಎಂಬ ದುಃಖವೂ ಈ ಕ್ರೋಧದ ಹಿಂದೆ ಅಡಗಿದೆ'' (ಪ್ರಜ್ಞೆ ಮತ್ತು ಪರಿಸರ) ಎಂಬುದು ಅನಂತಮೂರ್ತಿಯವರ ಅಂಬೋಣವಾದರೆ; ಅಡಿಗರದು ಮತ್ತೊಂದು ರೀತಿಯ, ಕುಟಿಲತನದ ಹೇಳಿಕೆ. ಪ್ರಜಾವಾಣಿ ಸಾಪ್ತಾಹಿಕ ಪುರವಣಿಯಲ್ಲಿ "ಕಾವ್ಯ ಮಾನವತೆಯ ಸಾರ ಎಂಬ ಮಾತನ್ನು ಎಂದೂ ಮರೆಯಬಾರದು. ದೇಶ, ಕಾಲ, ಜಾತಿ, ಜನಾಂಗ, ವೃತ್ತಿ ಈ ಯಾವವೂ ಒಂದು ಕಾವ್ಯವನ್ನು ಅನುಭವಿಸುವ ಕ್ರಿಯೆಗೆ ಪ್ರತಿಬಂಧಕವಾಗಲಾರವು. ಕಾವ್ಯ ಮನುಷ್ಯನ ಮನಸ್ಸಿನ

ಸಾರ್ವತ್ರಿಕ ಸ್ಥಿತಿಗಳನ್ನು ಕುರಿತು ಇರುವಂಥದು. ವ್ಯಕ್ತವಾಗುವ ರೀತಿ ಭಾಷೆ ಬೇರೆಯಾದೀತಲ್ಲದೆ ಅಭಿವ್ಯಕ್ತಿಯ ಮೂಲ ಸತ್ವ ಎಲ್ಲರೂ ಅರಿಯಬಹುದಾದ ಮಾನವನ ಅಂತರಂಗ ಜೀವನದ ವಿವಿಧಾಂಶಗಳೇ ಆದ ಕಾರಣ ಇದು ಈ ಜಾತಿಯವನು ಬರೆದದ್ದು, ಇದು ಈ ಮತದವನು ಬರೆದದ್ದು, ಇದು ಈ ವೃತ್ತಿಯವನು ಬರೆದದ್ದು ಆದ ಕಾರಣ ನಮಗಲ್ಲ ಎಂಬ ಮಾತು ಹುರುಳಿಲ್ಲದ್ದು" ಎಂದಿದ್ದಾರೆ. ಅಡಿಗರು ಬೇಕಾದಷ್ಟು ತಿಣಕಾಡಿ ಸಮರ್ಥಿಸಿಕೊಂಡರೂ ಅವರ ಕಾವ್ಯ ಬಹುಪಾಲು ಶೂದ್ರಜನರಿಗೆ ಸಂಬಂಧವಿಲ್ಲದ್ದೆಂಬುದು ಮಾತ್ರ ಕಟುಸತ್ಯ. ನನ್ನ ಸ್ಪಂದನೆಗಳಿಗೆ ಅಡಿಗರ ಕಾವ್ಯದಲ್ಲಿ ಉತ್ತರ ಸಿಗಲಾರದು. ಬ್ರಾಹ್ಮಣ ಲೇಖಕನೊಬ್ಬ ಬ್ರಾಹ್ಮಣ ಓದುಗನಿಗಾಗಿಯೇ ಬರೆದದ್ದು ಅವರ ಕಾವ್ಯ, ಜಾತಿಗೂ, ರಾಜಕೀಯಕ್ಕೂ, ಸಾಹಿತ್ಯಕ್ಕೂ ನಿಕಟಸಂಬಂಧ ನಮ್ಮ ದೇಶದಲ್ಲಿದೆ. ಕುಮಾರವ್ಯಾಸ ಪಂಪರಲ್ಲಿ ಸ್ಪಷ್ಟ ಭಿನ್ನತೆ ಇರುವಂತೆ ಅಡಿಗ, ಲಂಕೇಶ, ಪಾಟೀಲರ ನವ್ಯಮನೋಧರ್ಮ ಸ್ವೀಕರಣೆಯಲ್ಲಿಯೂ ಇದೆ. ಶೂದ್ರನ ಜಿಗಟುತನ, ಸೊಕ್ಕು, ಬದುಕಿನೊಂದಿಗಿನ ಹೊಂದಾಣಿಕೆ ಶೂದ್ರತ್ವ ಇವರಲ್ಲಿ ಹೊಡೆಯುತ್ತಿದ್ದರೆ, ವೈದಿಕತನ, ಕಳೆದುಕೊಂಡುದರ ಹಳಹಳಿ ಅಡಿಗರ ಕಾವ್ಯದಲ್ಲಿ ಗೋಚರಿಸುತ್ತಿದೆ.

ಇದಕ್ಕೆ ಪೂರಕವಾಗಿ ಸಾಹಿತ್ಯ ಕೃತಿಗಳಲ್ಲಿ ವೈಚಾರಿಕತೆ ತಂದವರು ಬ್ರಾಹ್ಮಣ ಲೇಖಕರೆಂದು ಹೇಳುತ್ತಾರೆ. ಇದನ್ನು ಹೇಳುವವರೂ ಬ್ರಾಹ್ಮಣರಾದ ಅನಂತಮೂರ್ತಿಯವರೆಂಬುದು ಮುಖ್ಯವಾದುದು. ಬೌದ್ಧಿಕತೆಯ ವಾಹಕಗಳಾದ ಹಿಂದಿನ ಸಂಸ್ಕೃತ, ಈಗಿನ ಇಂಗ್ಲೀಷ ಭಾಷೆ ಇವರ ಸೊತ್ತಾಗಿದ್ದಾಗ ಈ ಮಾತು ಖರೆ. ಅಡಿಗರು ಇಂಗ್ಲೀಷ ಓದಿನಿಂದ ನವ್ಯಮನೋಧರ್ಮ ರೂಢಿಸಿಕೊಂಡರು. ತಮ್ಮ ೩೭ ನೇ ವಯಸ್ಸಿನಲ್ಲಿ ಅದ್ಭುತ ಕ್ರಾಂತಿಯಾಯಿತೆಂದು ಹೇಳುತ್ತಾರೆ. ಇದು ಇಂಗ್ಲೀಷ ಶಿಕ್ಷಣ, ವಿದ್ಯೆಯ ಪ್ರಭಾವವೇ ಹೊರತು ಬೇರೆಯಲ್ಲ. ಹಳಸಿದ ಭಾವಗೀತ ಸಂಪ್ರದಾಯವನ್ನು ಶ್ರೀಯವರು ತಂದರೆ, ಪದಗಟ್ಟಿ ನವ್ಯಮನೋಧರ್ಮವನ್ನು ಸುಳ್ಳುಸುಳ್ಳೇ ಆರೋಪಿಸಿಕೊಂಡು ಅಡಿಗರು ಬರೆದರು. ಸಂಸ್ಕೃತ ಹಾಗೂ ಇಂಗ್ಲೀಷ ಭಾಷೆಯ ವಿದ್ಯೆ ಅಡಿಗರನ್ನು ನಮ್ಮ ಪರಂಪರೆಯಿಂದ ದೂರವಾಗಿಟ್ಟು, ಪರಕೀಯರಾಗಿ ಉಳಿಯುವಂತೆ ಮಾಡಿದೆ. ಭೈರಪ್ಪನವರ ಕಾದಂಬರಿಗಳೂ ನಮ್ಮ ಬದುಕಿಗೆ

ವಿಮುಖವಾಗಿ ನಿಲ್ಲುವ ಮುಖ್ಯಕಾರಣ ಅವರ ಸಂಸ್ಕೃತ ಪಾಂಡಿತ್ಯ. ಅಕ್ಷರ ಬಲ್ಲ ಈ ಜನ ಕಮು, ಕಾಫ್ಕಾ, ಸಾರ್ತ್ರ ಮುಂತಾದ ಚಿಂತಕರ ಸಿದ್ಧಾಂತಗಳನ್ನು ಅನಾಮತ್ತಾಗಿ ಎತ್ತಿಕೊಂಡು ಕನ್ನಡ ಸಾಹಿತ್ಯದ ಮುಂಚೂಣಿಯಲ್ಲಿ ಮೆರೆದರು. ಆದುದರಿಂದಲೇ ಕನ್ನಡ ಸಾಹಿತ್ಯ ಕುಷ್ಠರೋಗದಿಂದ ಬಳಲಬೇಕಾಯಿತು. ಅನಂತಮೂರ್ತಿಯವರ ಕಥೆ, ಕಾದಂಬರಿ ಹಾಗೂ ವಿಮರ್ಶೆಯೂ ಕೂಡಾ ಕಡ ತಂದ ಭೌದ್ಧಿಕ ವಿಚಾರಸರಣಿಯ ಫಲ.

ಈ ಎರಡೂ ಸಮಸ್ಯೆಗಳು ನನ್ನ ವಾರಿಗೆಯ ಯುವ ಲೇಖಕರಲ್ಲಿ ಹೇಗೆ ಕೆಲಸ ಮಾಡುತ್ತವೆ ನೋಡಬೇಕು. ಇತ್ತೀಚಿನ ಯುವ ಬರಹಗಾರರಲ್ಲಿ ಕೇಳಿ ಬರುತ್ತಿರುವ ಹೆಸರುಗಳು : ಅಲ್ಲಮಪ್ರಭು ಬೆಟ್ಟದೂರ, ಪಂಡಿತಾರಾಧ್ಯ ಹಾಗೂ ವಿಜಯ ಪಾಟೀಲ, ಬ್ರಾಹ್ಮಣ ಲೇಖಕನಾದ ಜಯಂತ ಕಾಯ್ಕಿಣಿ. ಇವರಲ್ಲಿ ಹೊರಲಾರದಷ್ಟು ಪ್ರಚಾರ ಪಡೆದವ ಜಯಂತ ಒಬ್ಬನೆ. ಕನ್ನಡಕ್ಕೆ ಗೌರೀಶ ಕಾಯ್ಕಿಣಿಯವರು ಕೊಟ್ಟ ದೊಡ್ಡ ಕಾಣಿಕೆ ಅವರ ಮಗ ಜಯಂತ ಎಂಬ ವಾಡಿಕೆಯೂ ಇದೆ. ನಮ್ಮಲ್ಲಿ ಜೋಟುದ್ದ ಬ್ರಾಹ್ಮಣನು ಕೊರೆದದ್ದೂ ಸಾಹಿತ್ಯಿಕ ತುಂಡು ಆಗುವ ಸಂಭವವಿದೆ. ಪಪ್ಪ, ಮಮ್ಮಿ, ಡ್ಯಾಡಿ ಎನ್ನುವ ಜಯಂತನಿಗೆ ಸಿಕ್ಕಷ್ಟು ಸಹಜ ಪ್ರಚಾರ ಉಳಿದವರಿಗೆ ಸಿಗಲಾರದು. ಈ ಮೇಲಿನ ಬರಹಗಾರರಲ್ಲಿ ಅಲ್ಲಮಪ್ರಭು ಸಾಹಿತ್ಯದಲ್ಲಿ ಡಿಗ್ರಿ ಪಡೆದು ಒಕ್ಕಲು ಮಗನಾಗಿ, ನಿಜವಾದ ಬದುಕಿನ ಕಾಮ, ಕ್ರೋಧ, ಮದ, ಮತ್ಸರ ಮುಂತಾದ ವಸ್ತುಗಳಲ್ಲಿ ತಾನು ಒಂದಾಗಿ ಸಕಲ ಇಂದ್ರಿಯಗಳನ್ನೂ ತೆರೆದಿಟ್ಟು ಬರೆಯುವ ಕ್ರಾಂತಿಕಾರಿ ಲೇಖಕ. ಪಂಡಿತಾರಾಧ್ಯ ಕಾಯಿದೆಯ ಡಿಗ್ರಿ ಪಡೆದು ಸಾಹಿತ್ಯ ರಚಿಸುವಾತ. ವಿಜಯ ಪಾಟೀಲ, ಕೃಷಿ ಕಾಲೇಜಿನ ವಿದ್ಯಾರ್ಥಿ. ಜೀವನದಲ್ಲಿ ಅದಮ್ಯ ಉತ್ಸಾಹ ಹೊಂದಿದವ. ಕಲ್ಲನ್ನು ಗುದ್ದಿಯಾದರೂ ನೀರು ಬರಿಸಿ ಬದುಕಿನ ಜಿಗುಟುತನ ಉಳಿಸಬೇಕೆಂದು ಹೇಳುವವ. ಇಲ್ಲಿಯ ವರೆಗೂ ವೈದಿಕ, ಇಂಗ್ಲೀಷ ಬಲ್ಲವರ ಸೊತ್ತಾಗಿತ್ತು ಕನ್ನಡ ಸಾಹಿತ್ಯ. ಇಂದು ಜೀವನದಲ್ಲಿ ವಿವಿಧ ಸ್ತರಗಳಲ್ಲಿ ಕೆಲಸ ಮಾಡುವವರು ಸೃಜನಾತ್ಮಕ ಕ್ರಿಯೆಯಲ್ಲಿ ತೊಡಗಿರುವುದು, ಇಂಗ್ಲೀಷಿನಿಂದ corrupt ಆಗದೇ ಬರೆಯುವ ಇವರು ಆರೋಗ್ಯಕರ ಸಾಹಿತ್ಯ ನಿರ್ಮಿಸಬಹುದಾಗಿದೆ. ಅದಕ್ಕೇ ಅಲ್ಲಮಪ್ರಭು 'ಪ್ರಪಂಚ'ಪತ್ರಿಕೆಯಲ್ಲಿ "ಲಂಕೇಶರ ಸಿಟ್ಟು ಸೆಡುವು, ಸ್ಪಷ್ಟತೆ, ಒರಟುತನ, ಸತ್ಯವನ್ನು ಶೋಧಿ

ಸುವ ಫಲ; ಚಂದ್ರಶೇಖರ ಪಾಟೀಲರ ಚಾಲಾಕು; ಎಂಥ ವಸ್ತುವನ್ನೂ ಕವನ ಮಾಡುವ ಜಾಣ್ಮೆ, ಕವಿ ಕಣವಿಯವರ ಗುಣ; ನಾವು ಈಗ ಬರೆಯಬೇಕಾದದ್ದು ಬದುಕಿನ ಕಾವ್ಯ. ಸುತ್ತು ಮುತ್ತಣ ಬದುಕಿನಿಂದ ನಮಗೆ ನಾವು ಶಕ್ತಿ ತುಂಬಿ ಕೊಳ್ಳಬೇಕು. ನಾವು ಉಂಡ ಅನ್ನವೇ ನಮಗೆ ರಕ್ತ ನೀಡುತ್ತದೆ. ಅಚ್ಚಕನ್ನಡ ಸಾಹಿತ್ಯ ಸೃಷ್ಟಿಸಲು ಹೆಣಗುತ್ತಿರುವವರು ನಾವು" ಈ ಮನೋಧರ್ಮ ಮೆಚ್ಚಬೇಕಾದದ್ದೆ.

ವರ್ಣಗಳ ನಿರ್ಮಾಣದ ಜೊತೆ ಜೊತೆಗೆ ಕವಿಯನ್ನು ಋಷಿಯಾಗಿ ಮಾಡಿಟ್ಟದ್ದು ನಮ್ಮ ಸಮಾಜದ ರಾಜಕೀಯ. ಸಾಮಾಜಿಕ ಜೀವನದಲ್ಲಿ ಪಾಲುಗೊಳ್ಳದಂತೆ ಸುತ್ತ ಭದ್ರ ಬೇಲಿ ಬಿಗಿದದ್ದು ಕರಾಳತನ. ಸಾಹಿತ್ಯಲೋಕವೇ ಬೇರೆ, ರಾಜಕೀಯ ಪ್ರಪಂಚವೇ ಬೇರೆ ಎಂಬ ಅಭಿಪ್ರಾಯ ಕೆಲವರದು; ಜೀವನದಿಂದಲೇ ಸಾಹಿತ್ಯ ಮತ್ತು ರಾಜಕೀಯ ಹುಟ್ಟುವ ಕಾರಣ ಇವುಗಳ ನಡುವೆ ಅಡ್ಡಗೋಡೆ ಕಟ್ಟುವುದು ಸಮಂಜಸವಲ್ಲವೆಂಬ ಹೇಳಿಕೆ ಇನ್ನು ಕೆಲವರದು. ಮೊದಲನೆಯವರ ಪ್ರಕಾರ, ಕವಿ ರಾಜಕೀಯದಲ್ಲಿ ಸೇರುವುದರಿಂದ ತಾನು ಒಪ್ಪಿಕೊಂಡ ಪಕ್ಷದ ತತ್ವಗಳನ್ನು ಸಾರುವ ಶಂಖವಾಗಬೇಕಾಗುತ್ತದೆ. ಆಗ ಆತನ ವಸ್ತುನಿಷ್ಠ ನೋಟ ಮಾಯವಾಗಬಹುದು. ಇದು ಪಾಟೀಲ, ಲಂಕೇಶ, ತೇಜಸ್ವಿ ಮುಂತಾದ ನವನಿರ್ಮಾಣ ಸಮಿತಿಯ ಬರಹಗಾರರನ್ನು ಕುರಿತು ಹೇಳಿದಂತೆ ಅನಿಸುತ್ತಿದೆ. ಇದಕ್ಕೆ ಪ್ರತಿಯಾಗಿ ಸಮಾಜವನ್ನು ರೂಪಿಸುವ ಮಹಾ ಶಕ್ತಿ ರಾಜಕೀಯ. ಸಾಹಿತಿಯಾದವನು ಬರೇ ಸಾಹಿತಿಯಾಗಿ ಬೇಕಾದಷ್ಟು ತೋಡಿಕೊಂಡರೂ ಅದು ಸಮಾಜವನ್ನು ಮುರಿದು ಕಟ್ಟುವ ಶಕ್ತಿಯಾಗಲಾರದು; ಕಾಗದಗಳಲ್ಲಿಯೇ ಕ್ರಾಂತಿ ಮಾಡಿದ 'ಪ್ರಗತಿಶೀಲ ಸಾಹಿತ್ಯ' ಅನುಭವಿಸಿದ ಸೋಲನ್ನು ಇಲ್ಲಿ ನೆನೆಯಬಹುದೆಂದು ಮಂಡಿಸುತ್ತಾ; ಬಿಜ್ಜಳನ ಪ್ರಧಾನ ಮಂತ್ರಿ ಬಸವಣ್ಣ, ಜಾತಿಯ ಲಾಂಛನ ಹರಿದೊಗೆದು, ತನ್ನ ಅನಿಸಿಕೆಗಳನ್ನು ಪ್ರಾಯೋಗಿಕತೆಯ ಮೂಲಕ ಕಂಡುಕೊಳ್ಳಲು ವಚನ ರಚನೆಮಾಡಿ, ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ರಾಂತಿಯಲ್ಲಿ ಪಾಲುಗಾರನಾದುದರಿಂದಲೇ ವಚನಸಾಹಿತ್ಯ ಇಂದಿಗೂ ಕಿಮ್ಮತ್ತುಳ್ಳದ್ದಾಗಿದೆ. ಬದುಕಿನಂತೆ ರಾಜಕೀಯದಲ್ಲಿ ಸಕ್ರಿಯ ಪಾತ್ರವಹಿಸುವುದರಿಂದಲೇ ಸಮಾಜ ಸುಧಾರಣೆ ಸಾಧ್ಯವೆಂದು

ಹೇಳುತ್ತಾರೆ. ಸಾಹಿತಿಯಾದವನು ದಂತ ಗೋಪುರದಲ್ಲಿ ಕುಳಿತು 'ಭಾರತೀಪುರ' 'ದಾಟು' ಮತ್ತು 'ಚೋಮುನ ದುಡಿ'ಯಂಥ ಕಾದಂಬರಿಗಳನ್ನು ಬರೆಯುವುದ ರಿಂದಲೇ ಕ್ರಾಂತಿಮಾಡುವುದು ನಗೆಪಾಟಲು. ರಾಜ್ಯದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ರಂಗಗಳಲ್ಲಿ ಹಂತ ಹಂತವಾಗಿ ಕ್ರಾಂತಿಯನ್ನು ತರಬೇಕೆಂಬ ಮಹಾಉದ್ದೇಶದಿಂದ ಬರಹಗಾರರ ಒಕ್ಕೂಟ ಅಸ್ತಿತ್ವಕ್ಕೆ ಬಂದಿದೆ. ಇನ್ನು ಮೇಲಾದರೂ ನಾಡಿನ ಸಮಸ್ತ ಸ್ತರಗಳ ಲೇಖಕರು ಕೊಡವಿಕೊಂಡೆದ್ದು ಮಹತ್ವಪೂರ್ಣ ಸಾಹಿತ್ಯ ನಿರ್ಮಾಣ ಮಾಡಬಹುದೆಂಬ ಮಹದಾಶೆ.

ಇನ್ನು ಯುವತಿಯರ ಸೃಜನಾತ್ಮಕ ಕ್ರಿಯೆಯ ಬಗ್ಗೆ ಏನು ? ಎಂದು ವಿಚಾರಿಸಿದರೆ ನಾಚಿಕೆ ಪಟ್ಟುಕೊಳ್ಳಬೇಕಾಗಿದೆ. ಯುವಕರು ಕಾಮ ಯೌವನಗಳ ಅನಿಸಿಕೆಗಳಿಗೆ ಬಾಯಿಯಾಗಿ ನಿಂತರೆ, ಯುವತಿಯರು ಸಮಾಜಕ್ಕೆ ಅಂಜಿ, ಅದನ್ನೆಲ್ಲಾ ನುಂಗಿ ಗಪ್ ಚುಪ್ ಕುಳಿತಿದ್ದಾರೆ. ಜೀವನದ ಪ್ರತಿಯೊಂದು ಘಟನೆಗೂ ತನ್ನ ಮೈಯೊಡ್ಡಿ ಅನುಭವ ಪಡೆದುಕೊಂಡು, ಆದ ಅನಿಸಿಕೆಗಳನ್ನು ಹೇಳುವ ಕುವ್ವತ್ತು ಅವರಲ್ಲಿ ಇಲ್ಲ. ಮಲ್ಲಿಗೆ, ಮಯೂರ, ತುಷಾರ, ರವಿವಾರ ಪತ್ರಿಕೆಗಳಲ್ಲಿ ಬರುವ ಆಳವಿಲ್ಲದ, ದಟ್ಟತೆಯಿಲ್ಲದ ಇವರ ಕತೆಗಳನ್ನು ಓದಿದರೆ ಮೈಯಲ್ಲಿ blood ಆದರೂ ಇದೆಯೋ ಇಲ್ಲೊ ? ಎಂದು ಕೇಳಬೇಕೆನಿಸುತ್ತಿದೆ. ತಿಂಗಳಿಗೊಂದರಂತೆ ಪುಂಖಾನುಪುಂಖವಾಗಿ ಕಾದಂಬರಿಯನ್ನು ರಚಿಸುವ ಲೇಖಕಿಯರು ತುಂಬಿದ್ದಾರೆ. ಅವರು 'ಬೂಸಾ' ಸಾಹಿತ್ಯ ನಿರ್ಮಾಣ ಮಾಡುವುದನ್ನು ಬಿಟ್ಟು ಗಂಡನ ಸೇವೆ ಮಾಡುತ್ತಿದ್ದರೆ ಸಾಕು. ಇದಕ್ಕೆ ಕಾರಣ ಮಹಿಳಾ ಲೇಖಕಿಯರೆಲ್ಲಾ ಬ್ರಾಹ್ಮಣ ಸ್ತ್ರೀಯರು. ಇವರ ವಸ್ತುಗಳು ತೀರಾ sentimental. ಗಂಡ ಸಿಗದೇ ಕೊಳೆಯುತ್ತಿರುವ ಬ್ರಾಹ್ಮಣ ಯುವತಿಯರಿಗಾಗಿ ರಚಿಸಿದ ಕೃತಿಗಳು. ಇವರಲ್ಲಿಯೂ ಕೆಲವೇ ಕೆಲವುಉತ್ತಮ ಸಾಹಿತ್ಯ ನಿರ್ಮಾಣಮಾಡುವ ಮಹಿಳೆಯರಿದ್ದಾರೆ. ಉದಾ: ವೀಣಾ ಯಲಬುರ್ಗಿ, ಕಮಲ ಹೆಮ್ಮಿಗೆ, ಶಶಿಕಲಾ ದೇಶಪಾಂಡೆ, ಇತ್ಯಾದಿ. ಆದರೂ ಹೌದೆನ್ನುವ ಸಾಹಿತ್ಯ ಸೃಷ್ಟಿ ಇವರಿಂದ ಇನ್ನೂ ಆಗಿಲ್ಲ.

ಇಷ್ಟೆಲ್ಲಾ ಹಗರಣವಾಯಿತು. ಆದರೆ ನಾವೆಲ್ಲಾ ಬರೆಯುತ್ತೇವಲ್ಲಾ ಯಾರ ಸಲುವಾಗಿ ? ಯುವ ಸಾಹಿತಿಗಳಾದ ನಾವು ಕಾಳಜಿಯಿಂದ ಚಿಂತಿಸಬೇಕಾದ

ವಿಷಯ. ನಮ್ಮ ಹಳೆಗನ್ನಡ ಸಾಹಿತ್ಯ ಹುಟ್ಟಿದ್ದು ಪಂಡಿತರನ್ನು ಲಕ್ಷ್ಯದಲ್ಲಿಟ್ಟು ಕೊಂಡು. ಭಾವಗೀತೆ ನವ್ಯಕಾವ್ಯ ಹುಟ್ಟಿದ್ದು ಬ್ರಾಹ್ಮಣ ಓದುಗರನ್ನು ತಣಿಸಲು. ಬ್ರಾಹ್ಮಣ ವಿಮರ್ಶಕರ ಮರ್ಜಿಗಾಗಿ ರಚಿಸಲ್ಪಟ್ಟ ಕನ್ನಡ ಸಾಹಿತ್ಯ ಬಹುಪಾಲು ಕನ್ನಡಿಗರನ್ನು ಧಿಕ್ಕರಿಸಿದ್ದು ನಮ್ಮ ಪರಂಪರೆಯ ದುರಂತ. ವಚನಕಾರರು ಇಂಥ ಸಮಸ್ಯೆಯನ್ನು ಮೊದಲೇ ಗ್ರಹಿಸಿ. ಬಗೆಹರಿಸಿಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾದರು. ಈ ದಿಶೆಯಲ್ಲಿ ನನ್ನ ಸಮಕಾಲೀನರಾದ ಅಲ್ಲಮ ಪ್ರಭು, ಪಂಡಿತಾರಾಧ್ಯ, ಹಾಗೂ ವಿಜಯ ಪಾಟೀಲ ಪ್ರಯತ್ನ ನಡೆಸಿದ್ದು, ದಿಗಂಬರ, ದಲಿತ ಪಾಂಥರ್ ಸಾಹಿತ್ಯದಿಂದ ಪ್ರೇರಣೆ ಪಡೆದಿದ್ದಾರೆ. ತಮ್ಮ ವಿಚಾರ ಜನ ಸಾಮಾನ್ಯರಿಗೆ ಕಲಾತ್ಮಕವಾಗಿಯೇ ಮುಟ್ಟಬೇಕೆಂಬುದು ಇವರ ಹಟ. ಕರ್ನಾಟಕ ಬರಹಗಾರರ ಒಕ್ಕೂಟದ ಸದಸ್ಯರಾದ ಇವರಿಂದ ವಚನಸಾಹಿತ್ಯದಂಥ ನಿಜವಾದ ಕಾವ್ಯ ಹುಟ್ಟುವ ಸಾಧ್ಯತೆ ಇದೆ. ಕಾದು ನೋಡಬೇಕು.

■ ■ ■

ಬಸವರಾಜ ಮುಲಶೆಟ್ಟಿ

ಗಡಿತಂಟಿ

ಓಣಿಯು ತುಂಬ ಗದ್ದಲ.
ಆ ಎರಡು ಮನೆಗಳ ಹಿತ್ತಲುಬೇಲಿ
ಸುಕಾಲದಲ್ಲಿ ಬಾಡಿ
ರಾಜಕೀಯ ಬೇಸಿಗೆಯಲ್ಲಿ ಚಿಗಿಯುತ್ತದೆ.
ಮನೆಗಳೆರಡೂ ಪ್ರಸವಿಸಿದ
ಮಕ್ಕಳು–ಮರಿಮಕ್ಕಳು
ಆಗಾಗ ಜಗಳ ಕಾಯುತ್ತವೆ.
ಮದುವೆ–ಅಂಗಡಿ–ಜಾತ್ರೆಗಳ
ಭೂತ ಭವಿಷತ್ತಿನಾಟಗಳನ್ನು
ಮರೆತುಬಿಡುತ್ತೇವೆ.
ಬೇಲಿಗೆ ಹಬ್ಬಿರುವ
ಮಲ್ಲಿಗೆ–ಮಿಡಿಸವತೆ ಹರಿದುಚೆಲ್ಲಿ
ತಂತಿಮುಳ್ಳನ್ನು
ಅಂಗೈಗೆ ಚುಚ್ಚಿಸಿಕೊಂಡು,
ಸುರಿದ ರಕ್ತದಲ್ಲಿಯೇ ಬಣ್ಣದ ಚಿತ್ರ ತಯಾರಿಸುತ್ತವೆ.
ಹಿತ್ತಲ ಸಾಕಾಗದೆ
ಓಣಿಗೆ ಬಂದು ಧೂಳೆಬ್ಬಿಸುತ್ತವೆ.
ಆ ಮನೆಸೇರಿದ ಇವರ ಬೆಕ್ಕು
ಸ್ವರ್ಗಕ್ಕೆ.
ಈ ಮನೆ ಸೇರಿದ ಅವರ ಕೋಳಿ
ಗಂಗಾಳಕ್ಕೆ.

ಬೆಳಗಾದರೆ, ತುಳಸಿಕಟ್ಟೆಗೆ ಮೂತ್ರಸಿಂಚನ;
ಸೂರಿನ ಗುಂಬ್ಬಿಗೂಡಿಗೆ ಬೆಂಕಿ.
ಓಣಿಯಲ್ಲಿ ಈ ಚಿನ್ನಾಟ ನಡೆದಾಗ
ಈ ಮನೆಯ ಕಲ್ಲಪ್ಪ
ಆ ಮನೆಯ ತುಳಜಾಬಾಯಿ
ಮುಚ್ಚೀಕದ ಮುಚ್ಚಿಕೊಂಡು
ನಡುಮನೆಯಲ್ಲಿ ಕುಳಿತು
ಚಕ್ಕಾ ಆಡುತ್ತಿರುತ್ತಾರೆ.
ತೀರ್ಮಾನ ಹೇಳಿ
ಶಾಂತಿ ಕರುಣಿಸೆಂದು ವಿನಂತಿಸಲು
ನರಸತ್ತ ಸರಪಂಚನ ಮನೆಗೆ
ಬಂದಾಗ ಕಂಡದ್ದು—
ಅವನೊಂದಿಗೆ
ಈ ಬೇಬರಸಿ ಹೆಣ್ಣುಗಳಿಬ್ಬರ ಏಕಶಯನ.

■ ■ ■

ಪ್ರಭಾವತಿ ಎಸ್. ವಿ.

ನನ್ನೊಡನಿದ್ದೂ ನನ್ನಂತಾಗದೆ

ನಾಲ್ಕು ಗೋಡೆಗಳ ಮಬ್ಬು ಹಿಡಿದ ಈ ಕ್ಲಾಸ್ ರೂಮಿನಲ್ಲಿ ಕುಳಿತೇ ಕೆಫ್ಟೀರಿಯಾದಲ್ಲಿ ಕ್ಲಾಸ್‌ಮೇಟ್ ಹುಡುಗರ ಜೊತೆ ಹರಟುತ್ತಾ ಕಾಫಿ ಹೀರುವ ಹುಡುಗಿಯಾಗುತ್ತೇನೆ.

ಲೈಬ್ರರಿಯ ಪುಸ್ತಕಗಳ ಸಂತೆಯಲ್ಲಿ ತಲೆ ಹುದುಗಿಯೇ ಓದದಲೆ ಫಸ್ಟ್‌ಕ್ಲಾಸ್ ಗಿಟ್ಟಿಸುವ ಕುಡಿಹುಬ್ಬಿನ ರೀಟಾ ಆಗುತ್ತೇನೆ.

ನವ್ಯ ಕವಿತೆಗಳನ್ನೋದಿ ಜೀವನಕ್ಕೂ ಅದಕ್ಕೂ ಇರುವ ಅಂತರಕ್ಕೆ ನಿಟ್ಟುಸಿರು ಬಿಡುತ್ತಲೇ ಟ್ರಿಪ್ ಹೋದಾಗ ಫ್ಲರ್ಟ್ ಮಾಡುವ ಲೀಲಾ ಆಗುತ್ತೇನೆ.

ಹುಡುಗರನ್ನು ಕತ್ತೆತ್ತಿ ನೋಡಲೂ ಮುಜುಗರ ಪಡುತ್ತಲೇ ಕಾಲೇಜಿನ ಮನ್ಮಥ ರಾಧಾಕೃಷ್ಣನ ಫಿಯಾನ್ಸಿಯಾಗುತ್ತೇನೆ.

ಬೋರ್ ಹೊಡೆಯುವ ಆಫೀಸಿನಲ್ಲಿ ತಿಂಗಳ ಸಂಬಳ ಎಣಿಸುತ್ತಲೇ ನಿಶ್ಚಿಂತ ಆರಾಮ ಕಾಲೇಜಿನ ಲೇಡಿ ಲೆಕ್ಚರರ್ ಆಗುತ್ತೇನೆ.

ಅಮ್ಮನ ಜೊತೆ ಚಪಾತಿ ಹಿಟ್ಟು ಲಟ್ಟಿಸುತ್ತಲೇ ಗೋವಾದ ಇನಿಯನಿಗೆ ಪ್ರೇಮ ಪತ್ರ ಬರೆಯುವ ತಂಗಿಯಾಗುತ್ತೇನೆ.

ಅಪ್ಪನೊಡನೆ ನವ್ಯ ಕಾದಂಬರಿಗಳ ಬಗ್ಗೆ ಹರಟೆ ಕೊಚ್ಚುತ್ತಲೇ ಓದಿನಿಂದ ಸಿಡಿದು ಗಂಡನ ಮನೆ ಸೇರಿದ ಗೆಳತಿಯಾಗುತ್ತೇನೆ.

ನನ್ನೊಡನಿದ್ದೂ ನನ್ನಂತಾಗದೆ ಬಳಲುತ್ತೇನೆ.

ಶಂಕರ ಪಾಟೀಲ

ನಾ ಏನ ಹೇಳ್ಲಿ

ಹಗ್ಗಾ ಹಾಕಿ
ಜಗ್ಗಿ ಬಿಗಿದು
ಹಾವಿನ
ಹೆಡಮುರಗಿ ಕಟ್ಟಿ
ಉಶ್ ಅಂದು
ಉಸರ ಬಿಟ್ಟು
ಕಟ್ಟೀ ಇಳದು
ಮಟ್ಟೀ ಹೊತ್ತು
ಹೊಳಿಗೆ ಹೊಂಟೆ.

ಹೊಳಿಗೆ ಬಂದ
ಜನಾ
ಜಳಕಾ ಮಾಡೂ
ದನ
ಕಚ್ಚೀ ಬಿಗದ
ಹೆಂಗಸೂರು
ಹರೇಕ ಬಂದ
ಗಂಡಸೂರು
ಏಡೀ ಹಿಡಿಯೂ
ಹುಡಗರು
ಮೀನಾ ಹಿಡಿಯು
ಮಸಲರ‍್ರು.

ಅಂತೂ ಇಂತೂ
ಹೊಳೀ ಬಂತು.
ಎದ್ದ್ನಿಂತು
ಸೊಂಟಾ ಕಟ್ಟಿ
ಕಲ್ಲ ಎಳದು
ಬಟ್ಟೀ ಸೆಳದು
ಗಂಟ ಕಟ್ಟಿದೆ.

ಝುಳ ಝುಳ
ನೀರು
ಸುಳು ಸುಳು
ಸದ್ದು
ಕಾಲಾಮಾರೀ
ತೊಳದು
ಬಗಸಿ ನೀರ
ಕುಡದು
ಗಂಟ ಹೊತ್ತು
ಮನೀಗಿ ಹೊಂಟ್ರ
ಹೊತ್ತ ಮುಣಗ್ತು.

ಸರಗೇರಿ ಆಟ
ಸುರು ಐತಿ

ಧೂಳ ಧುಮಡಿ
ಎದ್ದೈತಿ
ಪಂಚಾಯತಿ ಕಟ್ಟೀ
ಬಿಗದೈತಿ
ನ್ಯಾಯಾ ನಿಗದಿ
ನಡದೈತಿ.

ಕುಂಟೇಬಿಲ್ಲಿ
ಕಣ್ಣಮುಂಚ್ಯಾಲಿ
ಗಿಚ್ಚಿ ಬಗರಿ
ಲಗೋರಿ
ಡೀಕೀ ಗುಂಡ
ಧಪ್ಪಾ ಧುಪ್ಪೆ
ಗೇನಕಿ ಗಜಗ
ಫಾಜಗೊ.

ಆಣೇಕಲ್ಲುಂ
ಧಕ್ಕಾ
ಅಕ್ಕನ ಮಗಳುಂ
ಪಕ್ಕಾ !
ಹಣಿಕಿ ಹಾಕಿ
ಹೊರಗ ಬಂದು
ಇಣಕಿ ನೋಡಾಕಿ.

ಎದೀಮ್ಯಾಲ
ಶರಗ ಎಳದು
ಬಂಕಣ ಕಂಬಕ್ಕ
ಭುಂಜಾ ಹಚ್ಚಿ
ಸೊಂಟದ ಮ್ಯಾಲ
ಕೈ ಇಟ್ಟು
ಬಾಯಮ್ಯಾಲ
ಬಟ್ಟ ಇಟ್ರ
ಏನ ಹೇಳ್ಲಿ !

ನಾನೂ ಅಲ್ಲೇ
ಅವಳೂ ಅಲ್ಲೇ
ಕವನೆಳ್ಯಾಗ
ಸನ್ನಿ ಮಾಡಿ
ಕಳ್ಳತನದ್ಲೆ
ಮೆಲ್ಲಕ ನಡದುಂ
ಹಿತ್ತಲದಾಗಿನ
ಬಾವೀಹಿಂದ

ಹುಲ್ಲ ಬಣವಿ
ಮ್ಯಾಲ ಹತ್ತಿ
ಮೈ ಮರತ
ಮಲಕೊಂಡದ್ದು
ಏನ ಹೇಳ್ಲಿ !

ಅಕ್ಕನ ಮಗಳುಂ
ಪಕ್ಕಾ ನಾ
ಏನ ಹೇಳ್ಲಿ.

■ ■ ■

ರಾಲ್ಫ್ ಗಮಿ

■

ಇದ್ದಂತೆ

■ ■ ■

ಪ್ಯಾಂಟ ಹಾಕಿ ಕೋಟ ಹಾಕಿ ಮಾಡತಾರ್ರಿ ಶೋಕಿ
ತಿನಲಾಕ ಕೂಳಿಲ್ಲ ಕುಡಿಲಾಕ ನೀರಿಲ್ಲ (....ಹೊಡಿತಾರ ಜೋಲಿ !)

ಈ ತೊಗಲ ಡೊಳ್ಳಿನೊಳಗ ನಡೆದದ್ದೆ ದಿಳ್ಳಿಯೊಳಗೈತಿ
ಹರಿತಾರ, ತಿಂತಾರ ಹೀರತಾರ ಜನರ ರಕುತಾ
ಮಾತಿನೊಳಗ ಮರತಾರ ಮೆಯ್ಯ; ನಾಲಿಗಿ ತೊಗಲಂತ ಉಳದಾವ್ರಿ ಹಲ್ಲ.

ತತ್ವಕ ಗಂಟ ಬಿದ್ದು ಸತ್ತು ಹೋಗತೇವು ನಾವಿಲ್ಲಿ
ಅಲ್ಲಿ ಪಕ್ಷ ಅಂತ ಪಕ್ಕ ಬೆಳಸತಾರ ರೊಕ್ಕ ಗಳಿಸತಾರ
ದೇಶದ ಮಾನ ಮುಕ್ಕಗೊಳಸತಾರ.

ಹಣ ಉಬ್ಬರಾಡತದ ಕೈಯಾಸೆ ಮೆರೆಯಂತದ
ಸಂಸ್ಥೆಗಳ ಸುಟ್ಟುಹಾಕತಾರ ಜನಸಂಪರ್ಕ ಕಡಿಯಂತಾರ
ಜನರ ಕಣ್ಣು ಚುಚ್ಚತಾರ ಕಿವಿಯು ಕೊಯ್ಯುತಾರ.
ಬೇಸಿಗೆಯು ನಡು ಹಗಲ ಸೂರ್ಯನಾಂಗ 'ನೆತ್ತಿಯು ಕುಂಕ್ಕು'ತಾರ.

ಮೊಗದೊಳಗ ಏನ್‌ಛಂದ ನಗಿಯು —ಒಣಹೆಣದ ಕಿಸವಾಯಿ !
ಜರತಾರಿ ಅಂಚು ಟೆರಲೀನ ಮಿಂಚು —ತುಂಬೇರಿ ಸಂಚು.
ಚಿತ್ರಕ್ಷತ್ರಿದ ರಕ್ತಪಿಪಾಸೆಯು ಹೊಲಸು ಸಾಯಂತೈತ್ಯ
—ಮ್ಯಾಲ ಬಳದರ ಗಂಧ ?

ಒಣಗಿದ ಎಲುವಿನ ಹಂದರ ತಿರಗತಾವ ಕಣ್ಣುಂದ
ತೀರದ ತುತ್ತಿಗಾಗಿ ಹಾತೊರೆದು ನಿಂತದ ಭೂತ
ಮಾನ ಇಲ್ಲ ಮನಸಿನ್ಯಾಗ ಮಾರಿಹೋಯ್ತು ಉರದು ಮೆರದವ್ರಿಗೆ
ಕಡು ದುಡಿದರೇನು, ಎಲುವಿನ್ಯಾಗ ಹ್ಯಾಂಗ ಬಂದೀತು ಬೆವರಿನ ಬಿಂದು ?

'ಹಳ್ಳಿ'— ಹೊರಲಿಕ್ಕೆ ದೊರಿಲಿಲ್ಲ
'ಪಟ್ಟಣ'— ಸುಡಲಿಕ್ಕೆ ತೆರವಿಲ್ಲ.
'ಬೇರ' ಕರಗಿದರ 'ನೀರ' ಹ್ಯಾಂಗ ಏರೀತು ?
ಹುಡುಗ ಹಿಪ್ಪಿ ಬವಣಪಡತಾನ– ವ್ಯಾಳೆ ಇಲ್ಲ.
ರಕುತ ಕರಗಿದ 'ಬಿಳುಪು' ಮೆಯ್ಯೊಳು ಹರದಾಡತಾನನಂಗ.
ಹೊಟ್ಟೆ 'ಹುಳ ನುಂಗೇದ', ಹಸವಿ ಮರಥಾಂಗ ತರಿವಿಂಡ್ಯರ ಬೆನ್ಹತ್ತಿ
ಎದಿಯೊಳಗ ತಿರವಿಲ್ಲ ತುಯ್ದಾಡತೈತಿ ಗಿರ–ಗಾರ.
ಬತ್ತಿದ ಕಂಣು ಒತ್ತಿದ ಗಲ್ಲ ಸುಕ್ಕಿದ ಕೈಯಂ ನೆತ್ತಿಗೆ ಭಾರ
ಕನಸಿನೊಳಗು ಬಿಕ್ಕಳಿಸತೈತಿ ಹೆಣದೊಳಗ ಎಲ್ಲಿಯು ಸಾರ ?

ಸುಟ್ರ ಕಾಗಿ ಮುಟ್ಟಲಿಲ್ಲ ಗೂಗಿ ಹಾಯಲಿಲ್ಲ.
ಗಾಳ್ಯಾಗ ಗಾಳ್ಯಾಯ್ತು ಎಲುವಿನುರಿ ಉರುಟ ಜಿಗಿದು.
ಮನಸಿಗ್ಹತ್ತಿದ ಉರಿ ಆರಲಿಲ್ರಿ ಕಡಿತನಕ.

ತೇಜ ಉಳಿದದ್ದು ಮುಂವ್ವರಿಗೆ
ಸುಡತಾನ ಮ್ಯಾಲ 'ಸೂರ್ಯ'
ಉರಿತಾರ ಕೆಳಗೆ ಕಾಮ–ಭೀಮ

ಸಡವ ಕವಿ ಬಿಡತಾನೋ ಪ್ರಾಣ.

■ ■ ■

ವಿಜಯ ಪಾಟೀಲ

ನಾನಾ ನಮೂನೆಯ ನವ್ಯಕವಿಗಳಿಗೆ

ಓ, ನವ್ಯಕವಿಗಳು ! ಕನ್ನಡ ಸಾಹಿತ್ಯದಲ್ಲಿ
ಹೊಸ ಮನ್ವಂತರ ಶುರುಮಾಡಿದವರು !
ನಿಮಗೆ ನನ್ನ ನಮಸ್ಕಾರಗಳು; ಜೊತೆಗೇ
ಒಂದಿಷ್ಟು ಸಲಹೆಗಳು; ಒಂದೆರಡು ಸವಾಲುಗಳು.

ಎಲ್ಲರಿಗೂ ತಿಳಿಯದಂತೆ ಬರೆಯುವದನ್ನೇ
ವೈಶಿಷ್ಟ್ಯವನ್ನಾಗಿರಿಸಿಕೊಂಡಿರುವ,
ನಿಮ್ಮ ಒಂದು ಕವನ ಅರ್ಥೈಸಿಕೊಳ್ಳಲು
ಹತ್ತು ಪುಟಗಳ ವಿಮರ್ಶೆ (ಅದೂ ಪೂರ್ತಿ
ತಿಳಿಯುವದಿಲ್ಲ ಬಿಡಿ) ಓದುವಂತೆ ಮಾಡಿರುವ
ಅಡಿಗರೇ, ಅಡಿಗರ ಅನಂತರದವರೇ
ಕೊಳ್ಳಿ ಇಡಿ ನಿಮ್ಮ 'ಸಂಕೀರ್ಣತೆ'ಗೆ.
'ಕ್ಲಿಷ್ಟತೆ'ಗೆ ಕಲ್ಲುಹಾಕಿ ಜಜ್ಜಿಬಿಡಿ.

ಬಿಟ್ಟುಬಿಡಿ–ಯಾವ್ಯಾವುದೋ ಧರ್ಮಗ್ರಂಥಗಳಲ್ಲಿಯ
ಎಲ್ಲೆಲ್ಲಿಯದೋ ಸಾಹಿತ್ಯದಲ್ಲಿಯ ಪ್ರತಿಮೆಗಳನ್ನು
ಬೇಕಂತಲೇ ತುರುಕಿ ಓದುಗರನ್ನು
ಪರದಾಡಲಿಕ್ಕೆ ಹಚ್ಚುವ ಹಕನಾಕ ದಂಧೆಯನ್ನ.

ಇತ್ತೀಚೆಗೆ, ಸಿಕ್ಕಸಿಕ್ಕಲ್ಲಿ ನಾಯಿಕೊಡೆಗಳಂತೆ ಪುತುಪುತು
ಹುಟ್ಟಿರುವ ಕಿರಿ ಅಥವಾ ಮರಿ ಕವಿಗಳೇ
ಮರೆಯಬೇಡಿ– ನಿಮ್ಮ ಹೆಗಲ ಮೇಲಿರುವ ದೊಡ್ಡ ಜವಾಬ್ದಾರಿಯನ್ನ;

ನೀವೂ ಆ ಹಾಳಾದ, ಹಾಳುಮಾಡಿದ ಹಿರಿ ಕವಿಗಳ
ಹಾದಿಯಲ್ಲಿಯೇ ಹೆಜ್ಜೆಹಾಕಿ, ಅವರ ಬಾಲವಾಗಿ, ನೆರಳಾಗಿ
ತಂದುಕೊಳ್ಳಬೇಡಿ– ನಾಳಿನ ಪೀಳಿಗೆಯುಲ್ಲಿಯು ಸಾವಿರ ಸಾವಿರ
'ಬಸವಲಿಂಗಪ್ಪನಂಥವ'ರಿಂದ, 'ಇದೋ ಈ ಹಡಿಬಿಟ್ಟಿ ಸಾಹಿತಿಗಳೇ
ಬೂಸಾ ಸಾಹಿತ್ಯದ ತೂಕ ಹೆಚ್ಚಿಸಿದರು.'
ಅಂತ–ಬೀದಿಬೀದಿಯಲ್ಲಿ ಬೊಟ್ಟುಮಾಡಿಸಿಕೊಂಡು ಹೆಟ್ಟಿಸಿಕೊಳ್ಳುವ
ಪ್ರಸಂಗವನ್ನ.

ನೀವು ಹೊರತರಲಿರುವ ಸಂಕಲನಗಳು
ಕೇವಲ,
ಹೆಣ್ಣಿನ ಮೈಯ ಮಧ್ಯಬಿಂದು, ಒಟ್ಟು ವಜನ;
ಎದಿಯ ಕ್ಷೇತ್ರಫಲ; ತೊಡಿಯ ಘನಫಲ;
ಮಲಿಯ ಪರೀಘಗಳ ಬಗೆಗಿನ 'ಸಂಶೋಧನೆ'ಗಳಿಂದ,
ಪ್ರೀತಿಸುತ್ತಿರುವ ಇಲ್ಲಾ ಕೈಕೊಟ್ಟ ಕುಮಾರಿಯ
ಬಗೆಗಿನ ಪ್ರೇಮಪ್ರಕರಣಗಳ ಪದ್ಯಗಳಿಂದ
ತುಂಬಿತುಳುಕಿ ನಾರದಿರಲಿ – ತಿಪ್ಪೆಗುಂಡಿಗಳಂತೆ.

ದೇವಾನುದೇವತೆಗಳ ಸತ್ತ ಕನ್ನಡ ಭಾಷೆಗೆ
ಸೋಡಚೀಟಿ ಕೊಟ್ಟು, ನಿಮ್ಮ ಅಕ್ಷರಗಳು
ಅವತರಿಸಲಿ – ಗಟ್ಟಿ ಆಡುಭಾಷೆಯಲ್ಲಿ.
ಬಡವರ ಬೆವರಿನಿಂದಾಗಿ ಬಂಗಲೆಯಲ್ಲಿ ಲಲ್ಲೆ
ಹೊಡೆಯುತ್ತಿರುವ, ಕಾರುಗಳಲ್ಲಿ ಮೆರದಾಡುತ್ತಿರುವ ಭ್ರಷ್ಟ ಶ್ರೀಮಂತರ,
ಜಾತಿಯನ್ನು ಜೀವಂತವಾಗಿರಿಸಬೇಕೆನ್ನುವ ಜಾತ್ಯಾಂಧರ
ದಪ್ಪ ಚರ್ಮಕ್ಕೆ ನಾಟುತ್ತಿರಲಿ – ಭರ್ಚಿಯಂತೆ.
ಅರಿವು ಹುಟ್ಟಿಸಲಿ – ವಿದ್ಯಾವಂತ ಮೂರ್ಖಶಿಖಾಮಣಿಗಳಲ್ಲಿ.

'ಮಣ್ಣಿನ ವಾಸನೆ'ಯನ್ನ ಗವ್ಮಂತ ಹೊಡೆಸುತ್ತಿರುವ
ದೀಡಪಂಡಿತ ಮಹಾಶಯರೇ,

ನಿಮ್ಮ ಕವನಗಳು, ಓದಿ ಹೇಳಿದರೆ
ಮಣ್ಣಿನ ಮಕ್ಕಳಿಗೂ ಅರ್ಥವಾಗುವಂತಿರಲಿ;
ತಿಳಿಯಾಗಿರಲಿ; ನೇರವಾಗಿರಲಿ; ಸ್ಪಷ್ಟವಾಗಿರಲಿ.
ಶ್ರೀ ಸಾಮಾನ್ಯನ ಸಮಸ್ಯೆಗಳಿಗೂ ಸಂಬಂಧಪಟ್ಟಿರಲಿ.
ಅವರೂ ವಿಚಾರ ಮಾಡುವಂತೆ
ಪ್ರೇರೇಪಿಸಲಿ; 'ಬದುಕಿನ ಹೋರಾಟ'ಕ್ಕೆ ಅಣಿಗೊಳಿಸಲಿ.

ಬರೀ ಬುದ್ಧಿಜೀವಿಗಳಿಗಾಗಿಯೆಂದೇ ಬರೆಯುವ ಬುದ್ಧಿಜೀವಿಗಳೇ
ಅಥವಾ ಹಾಗಂತ ತಿಳಿದುಕೊಂಡ ಬುದ್ಧಿಗೇಡಿಗಳೇ
ಈ ಎಲ್ಲ ಸಲಹೆಗಳನ್ನು ಅಂಗೀಕರಿಸುವಿರಾ ?
ಇಲ್ಲಾ, ಬರೆಯುವದನ್ನೇ ನಿಲ್ಲಿಸಿಬಿಡುವಿರಾ ?

■ ■ ■

ಹಳಪೇಟಿ ಚಿಂತಾಮಣಿ

"ಸಾಂಸ್ಕೃತಿಕ ಸಂಸ್ಥೆಗಳು ಮತ್ತು ಸಾಂಸ್ಕೃತಿಕ ಕ್ರಾಂತಿ"

ಒಂದು ಮಾರುತ್ತರ

"ಕತ್ತೆ ತಾ ಬಲ್ಲದೆ ತಾ ಹೊತ್ತ ಕತ್ತುರಿಯ ಪರಿಮಳವ" ಎಂಬ ಕನ್ನಡದ ಪಡಿನುಡಿಯನ್ನು ನೆನಪಿಗೆ ತರುವಂತಹ, "ಕಸ್ತೂರಿಯ" ಸಹ ಸಂಪಾದಕರಾದ ಶ್ರೀ ಮಾಧವ ಮಹಿಷಿ ಅವರ ಪ್ರತಿಕ್ರಿಯೆ (ಸಂಕ್ರಮಣ ೬೩, ಪುಟ ೩೨) ಯನ್ನೋದಿದ ಮೇಲೆ ಮಾರುತ್ತರ ಕೊಡಬೇಕೆಂದು ಮಿತ್ರರು ಆಗ್ರಹ ಪಡಿಸಿದ್ದರಿಂದ ಉತ್ತರಿಸುತ್ತಿದ್ದೇನೆ. ತಲೆಬರಹದಲ್ಲಿ ಹೇಳಿದ (ದೊಡ್ಡ) ವಿಷಯದ ಮೇಲೆ ೧೫ ಮಿನಿಟಿನಲ್ಲಿ ಮಾಡಿದ ಭಾಷಣವೇ ಪ್ರಕಟವಾದ ನನ್ನ ಲೇಖನವಾಗಿದೆ. ಇದು ಗಮನಿಸಬೇಕಾದ ಅಂಶ.

'ಕಸ್ತೂರಿ' ಡೈಜೆಸ್ಟಿನ ಸಹಸಂಪಾದಕರಾದ ಶ್ರೀ ಮಹಿಷಿಯವರದು ಬಡಿಸುವವನ ಅಥವಾ ನೀಡುವವನ ಪಾತ್ರ. ನನ್ನದು ಅಡಿಗೆಗೆ ಬೇಕಾಗುವ ಸಾಮಾನುಗಳನ್ನು ದುಡಿದು ಗಳಿಸಿದ ಹಣದಿಂದ ತಂದು, ರುಚಿಯಾದ, ಶುಚಿಯಾದ ಅಡಿಗೆಯನ್ನು ಶ್ರಮಪಟ್ಟು ಮಾಡುವವನ ಪಾತ್ರ. ಬಡಿಸುವವನಿಗೆ ಅಂದರೆ ಮಾಣಿಗೆ ಅವನು ಏನೂ ಅಂಥ ಶ್ರಮ ಮಾಡದೇ 'ಟಿಪ್ಸ' ದೊರೆಯುತ್ತದೆ. ಅಂದಾಗ ಉಂಡವನನ್ನು ತೃಪ್ತಿ ಪಡಿಸಲು ತಾನೇ ಕಾರಣನೆಂದು ಮಾಣಿ ಹೆಮ್ಮೆಪಡುವದಿರುವದಿಲ್ಲ. ಆದರೆ ಇತ್ತಿಚೆಗೆ ಸಾಹಿತ್ಯ ಕ್ಷೇತ್ರದಲ್ಲಿ ಮಾಣಿವೃತ್ತಿ ಹೆಚ್ಚುತ್ತಿದೆ. ಯಾರೋ ಒಂದು ಬರಹವನ್ನು ವಿಮರ್ಶಿಸಿ ಬರೆದ ಬರಹವನ್ನು ಕಸ್ತೂರಿಯಲ್ಲಿ ಪ್ರಕಟಿಸುವ (ಉಣಬಡಿಸುವ) ದನ್ನು ಮಾತ್ರಬಲ್ಲ

ಮಹಿಷಿ ಅವರು ತಾವೇ ವಿಮರ್ಶೆ ಬರೆಯುಹೋಗಿ ಇಂಥ ಅಧ್ವಾನ ಬರಹ ಬರೆದಿದ್ದಾರೆ. ಇಂಥ ಬರಹಗಳೇ ವಿಮರ್ಶಾಕ್ಷೇತ್ರ ಬರಡಾಗಿರುವದಕ್ಕೆ ಕಾರಣ.

ಒಂದು ಲೇಖನವನ್ನು ಓದುವಾಗ, ಅದರಲ್ಲೂ ಚಿಕಿತ್ಸಕ ದೃಷ್ಟಿಯಿಂದ ಓದುವಾಗ, ಆ ಲೇಖಕನ ಮನೋವೃತ್ತಿ, ದೃಷ್ಟಿಕೋನಗಳೊಂದಿಗೆ ಒಂದಾಗದಿದ್ದರೂ, ಸಹ-ಅನುಭೂತಿಯನ್ನಾದರೂ ಹೊಂದಿರಬೇಕಾಗಿರುತ್ತದೆ. ಆದರೆ ಇಲ್ಲಿ ಮಹಿಷಿಯವರು ನನ್ನ ವಿಷಯವಾಗಿ, ನನ್ನ ಬರಹಗಳ ವಿಷಯವಾಗಿ ತಮ್ಮದೇ ಆದ ಅಭಿಪ್ರಾಯ ಹೊಂದಿದ್ದಾರೆ. ನನ್ನ ಅಭಿಪ್ರಾಯಗಳಿಗೆ ತಮ್ಮದೇ ಆದ ಅರ್ಥ ಹಚ್ಚುವ ಪ್ರಯತ್ನ ಮಾಡುತ್ತಾರೆ. ಅಲ್ಲದೇ ತಮ್ಮ ಅಭಿಪ್ರಾಯಗಳನ್ನು ನನ್ನ ಮೇಲೆ ಹಾಗೂ 'ಸಂಕ್ರಮಣ'ದ ವಾಚಕರ ಮೇಲೆ ಹೇರಬಯಸುತ್ತಾರೆ. ವಿಮರ್ಶೆಯನ್ನು ಚರ್ಚೆಯ ಮಟ್ಟಕ್ಕಿಳಿಸಿ ನನಗೆ ಪ್ರಶ್ನೆ ಹಾಕುತ್ತಾರೆ. ಇದರ ಅಂತರಾರ್ಥವನ್ನು ಬಿಚ್ಚಿ ಹೇಳಬೇಕಾಗಿದೆ. ಯಾಕೆಂದರೆ ಸಾಮಾನ್ಯ ವಾಚಕರಲ್ಲಿ ಪತ್ರಿಕಾ ಸಂಪಾದಕರೆಂದರೆ ರಸಜ್ಞರು, ಮರ್ಮಜ್ಞರು, ಸರ್ವಜ್ಞರು ಎಂಬ ಭಾವನೆ ಇರುತ್ತದೆ.

ಶ್ರೀ ಮಹಿಷಿ ಅವರಿಗೆ ಕುಟುಕಿರುವ ವಿಷಯವೆಂದರೆ ಅವರೇ ಒಂದೆಡೆ ಹೇಳಿದಂತೆ "ಕ್ರಾಂತಿಕಾರಿಯೆಂದು ಬೆನ್ನು ಚಪ್ಪರಿಸಿಕೊಳ್ಳುತ್ತಿರುವ ನೀವು" ಎಂಬುದೇ ಆಗಿದೆ. ಅವರು ತಿಳಿದಿದ್ದಾರೆ : "ಬ್ರಾಹ್ಮಣರ 'ಪಾಪ'ಗಳ ಬಗ್ಗೆ ಆಡಿಕೊಂಡು" ನಾನು ಬ್ರಾಹ್ಮಣೇತರಿಂದ ಹೆಚ್ಚಾಗಿ ಲಿಂಗಾಯತರಿಂದ ಗೌರವ ಪಡೆಯುತ್ತಿದ್ದೇನೆಂದು. ಅದಕ್ಕಾಗಿ ಅವರು ಕೇಳುತ್ತಾರೆ "ನೀವು ನಿಮ್ಮ ಬ್ರಾಹ್ಮಣ್ಯವನ್ನು ಕೈ ಬಿಡಲು ಇದು ವರೆಗೆ ಏನೇನು ಮಾಡಿದ್ದೀರೆಂಬುದನ್ನು ದಯವಿಟ್ಟು ನಿಮ್ಮ ಅಭಿಮಾನಿಗಳಿಗಾದರೂ ಹೇಳುತ್ತೀರಾ" ಎಂದು. ಪ್ರತಿಯೊಂದನ್ನು ಅರ್ಥೈಸುವ ಚಟವಿಟ್ಟುಕೊಂಡ ಅವರಿಗೆ ಬ್ರಾಹ್ಮಣ್ಯ ಮತ್ತು ಬ್ರಾಹ್ಮಣ ಜಾತಿಗಳ ಅರ್ಥವೇ ಆಗಿಲ್ಲವೆಂದು ಹೇಳಬೇಕಾಗಿದೆ. ಬ್ರಾಹ್ಮಣ್ಯ ಮತ್ತು ಬ್ರಾಹ್ಮಣ ಜಾತಿಗಳಲ್ಲಿ, ಜಾತಿವಂತ ಕುದುರೆ ಮತ್ತು ಕುದುರೆಯ ಜಾತಿಯ ಪ್ರಾಣಿಗಳಲ್ಲಿರುವಷ್ಟು ಅಂತರವಿರುತ್ತದೆ. ಜನ್ಮದಿಂದ ಜಾತಿ ಎಂಬ ಕಾಲ್ಪನಿಕ ಶ್ರೇಷ್ಠತೆಯ ವಾತಾವರಣದಲ್ಲಿ ಬೆಳೆದ ಇಂದಿನ ಬ್ರಾಹ್ಮಣ ಜಾತಿಯಲ್ಲಿ ಜಾತಿವಂತ ಕುದುರೆಗಳಿಗಿಂತ

ಕುದುರೆಯ ಜಾತಿಯ ಪ್ರಾಣಿಗಳಂಥವರೇ ಹೆಚ್ಚಾಗಿರುವದರಿಂದ, ಬ್ರಾಹ್ಮಣ ತಂದೆ, ತಾಯಿಗಳಿಗೆ ಮಗನಾಗಿ ಹುಟ್ಟಿದ ಆಕಸ್ಮಿಕಕ್ಕಾಗಿ ಅತಿಯಾಗಿ ಪಶ್ಚಾತ್ತಾಪ ಪಡುತ್ತಿರುವ ಆಧುನಿಕ ಕನ್ನಡ ಲೇಖಕರನೇಕರನ್ನು ಮಹಿಷಿಯವರು ಕಾಣುತ್ತಿರಬಹುದು. ಶ್ರೀ ಬೀಚಿಯವರ ವಿಷಯ ಅವರೇ ಹೇಳಬೇಕು. ನನ್ನ ವಿಷಯವಾಗಿ ಮಹಿಷಿಯವರೇನೆ ಹೇಳಲಿ ನನಗೆ ಮಾತ್ರ ಅಂಥ ಪ್ರಸಂಗ ವೇನೂ ಇಲ್ಲ.

ನನಗೆ ಇತಿಹಾಸದಿಂದ ಪಾಠ ಕಲಿಯಲು ಸಾಧ್ಯವಾಗಲಿಲ್ಲವಲ್ಲ ಎಂದು ಮಹಿಷಿಯವರು ಕೊರಗುತ್ತಾರೆ. ಯಾವ ಇತಿಹಾಸದಿಂದ ಎಂಬುದನ್ನವರು ಹೇಳದಿದ್ದರೂ, ನಮ್ಮ ಸ್ವಾತಂತ್ರ್ಯದ ಇತಿಹಾಸವನ್ನವರು ಅರ್ಥಮಾಡಿ ಹೇಳಿ ದ್ದನ್ನು ಓದಿದಾಗ, ಇತಿಹಾಸದ ವಿಷಯವಾಗಿ ಅವರಿಗಿದ್ದ ಕಲ್ಪನೆ, ಕುಕಲ್ಪನೆಯ ಬಗ್ಗೆ ನಾನೇ ಕೊರಗಬೇಕಾಗಿದೆ. ಮೊದಲನೆಯದಾಗಿ ಸತ್ಯ ಮತ್ತು ಇತಿ ಹಾಸದ ತಾರತಮ್ಯವೇ ಅವರಿಗೆ ತಿಳಿದಿಲ್ಲ. ಅವರು ಹೇಳಿದ್ದು ಇತಿಹಾಸವಲ್ಲ ಅಥವಾ ಅವರು ತಿಳಿದದ್ದು ಇತಿಹಾಸವಲ್ಲ ಎಂದು ಹೇಳಬೇಕಾಗಿದೆ. ಮಹ ರಾಷ್ಟ್ರದಲ್ಲಿ ಇತ್ತೀಚೆ ಶಿವಾಜಿ ಮಹರಾಜನ ಇತಿಹಾಸದ ಹಿಂದಿರುವ ಸತ್ಯವನ್ನು ಬರೆದು ಡಾ. ರಾನಡೆ ಎಂಬ ಇತಿಹಾಸದ ಪ್ರಾಧ್ಯಾಪಕರು ನೌಕರಿ ಕಳೆದು ಕೊಂಡರು. ಇತಿಹಾಸವೆಂದರೆ ಮಹಿಷಿಯಂಥವರು ತಿಳಿದದ್ದೆಂದರೆ ಅರಸರ ಹಿಂಸಾತ್ಮಕ ಯುದ್ಧ ಹಾಗೂ ಅರಸರ ಕೀರಿಟಗಳ ಉರುಳಾಟ ಇಷ್ಟೇ ಆಗಿದೆ. ಇತಿಹಾಸಕ್ಕೆ ಇನ್ನೂ ಒಂದು ಮುಖವಿದೆ ಎಂಬುದು ಅವರಿಗೆ ಗೊತ್ತಿದ್ದಂತಿಲ್ಲ.

ಜಗತ್ತಿನ ಅನೇಕ ರಾಷ್ಟ್ರಗಳ ಕ್ರಾಂತಿಗಳಲ್ಲಿ ಪ್ರತ್ಯಕ್ಷ ಭಾಗವಹಿಸಿದ್ದ ಮೇಧಾವಿ ಎಂ. ಎನ್. ರಾಯ್ ಅವರು, ವಿಚಾರಗಳೂ ಇತಿಹಾಸ ನಿರ್ಮಿಸುತ್ತವೆಂದು ಹೇಳುತ್ತಾರೆ. "History is not a mere chronical of events, not only the story of Kings and Battles and wars waged and won or lost; nor is it only the history of the conflict of classes or the evolution of the forces of Production. History is all that, but in addition history is also the dynamics of ideas. Unless the history of the

evolution of ideas is studied together with that of the march of events, we shall not have a comprehensive view of history...." ಬೌದ್ಧಿಕಕ್ರಾಂತಿ, ವೈಚಾರಿಕ ಕ್ರಾಂತಿಗಳ ವಿಷಯವಾಗಿ ಲಘುವಾಗಿ ಮಾತನಾಡುವ ಶ್ರೀ ಮಹಿಷಿ ಅಂಥವರು ಇದನ್ನು ಗಮನಿಸುವದಗತ್ಯ.

ವಿಷಯವನ್ನು ಗಂಭೀರವಾಗಿಯೇ ವಿವೇಚಿಸುವದಾದರೆ ವೈದಿಕ ಸಂಸ್ಕೃತಿಯಿಂದ, ವೀರಶೈವ ಸಂಸ್ಕೃತಿಗೆ ನಡೆದ ವಿಚಾರದ ಬೆಳವಣಿಗೆ (ಉತ್ಕ್ರಾಂತಿ) ಯನ್ನು ಗಮನಿಸಬೇಕಾಗುತ್ತದೆ. ವೈದಿಕರು ದೇವರನ್ನು ಅರ್ಥಮಾಡಿಕೊಳ್ಳುವದಿರುತ್ತದೆಂದು ತಿಳಿದರೆ, ವೀರಶೈವರು ದೇವರನ್ನು ಅನುಭವಕ್ಕೆ ತೆಗೆದುಕೊಳ್ಳುವದಿರುತ್ತದೆಂದು ತಿಳಿಯುತ್ತಾರೆ. ಅಂತೆಯೇ ವೈದಿಕ ಧರ್ಮಕ್ಕೆ ಅಧ್ಯಾತ್ಮ ತತ್ವಜ್ಞಾನವೇ ಆಧಾರವಾದರೆ, ವೀರಶೈವರಿಗೆ ಅನುಭಾವ ತತ್ವಜ್ಞಾನವೇ ಆಧಾರವಾಗಿರುತ್ತದೆ. ವೈದಿಕರಾದ ಶ್ರೀ ಮಹಿಷಿ ಅವರು ಪ್ರತಿಯೊಂದನ್ನು ಅಂದರೆ ನನ್ನನ್ನೂ ಹಾಗೂ ನನ್ನ ಬರಹಗಳನ್ನೂ ತಮಗೆ ತಿಳಿದಂತೆ ಅರ್ಥಮಾಡುತ್ತಾರೆ. "....ನನ್ನ ನಿಮ್ಮಂಥ ಕೆಲ ಬ್ರಾಹ್ಮಣರ ಬಲಿ ಕೇಳುತ್ತಿದ್ದರೆ ಅದಕ್ಕೇಕೆ ಅಳಕುತ್ತೀರಿ?" ಎಂದು ನನ್ನನ್ನೂ ತಮ್ಮಂತಹ ಬ್ರಾಹ್ಮಣರಲ್ಲಿ ಎಳೆಯುಬಯಸುತ್ತಾರೆ. ಎಲ್ಲರನ್ನೂ ಅರ್ಥಮಾಡುವದನ್ನೇ ಗುರಿಯಾಗಿಟ್ಟುಕೊಂಡವರು, ತಮ್ಮ ಮನಸ್ಸಿಗೆ ಬಂದಂತೆ ಅರ್ಥಮಾಡುವ ಅನರ್ಥಕಾರೀಕ್ರಮ ಅನುಸರಿಸುವದರಿಂದ ನನ್ನ ಇದೊಂದೇ ಲೇಖನಕ್ಕಲ್ಲ, "ಅವರ ಎಲ್ಲ ಬರವಣಿಗೆಗಳಲ್ಲೂ ಈ ಅಂಶ ಎದ್ದು ಕಾಣುತ್ತದೆ" ಎಂದು ಮಹಿಷಿ ಆರೋಪಿಸುತ್ತಾರೆ. ನಾನು ಅನುಭವಕ್ಕೆ ಮಹತ್ವಕೊಡುವವ, ಅವರು ಅರ್ಥಕ್ಕೆ ಮಹತ್ವ ಕೊಡುವವರು. ಅವರು ಕೊಟ್ಟ ರೊಕ್ಕಕ್ಕೆ ಕಾಲಂ ತುಂಬುವವರು. ನಾನು ಆತ್ಮಸಂತೋಷಕ್ಕಾಗಿ ಕಾಲಂ ತುಂಬುವವ. ಅಂದಮೇಲೆ ಇಬ್ಬರ ವಿಚಾರಗಳೂ ಹೊಂದುವದು ಹೇಗೆ ಸ್ವಾಮೀ!

ಕನ್ನಡ ಸಾಹಿತ್ಯದ ವಿಷಯದಲ್ಲಿಯು ನನ್ನ ಅಭಿಪ್ರಾಯವೂ ಅನುಭವವನ್ನೇ ಆಧರಿಸಿದ್ದು. ವೈದಿಕ ಪ್ರಜ್ಞೆಯು ಕನ್ನಡ ಕವಿಗಳು "ಅರಸುಗಳಿಗಿದುವೀರ" ಎಂದು ಅರಸರ ಯುದ್ಧ, ಹಿಂಸಾತ್ಮಕ ಶೂರತನಗಳನ್ನೇ ತಮ್ಮ ಕಾವ್ಯಗಳಲ್ಲಿ ಬಣ್ಣಿಸಿದ್ದರೆ, ವೀರಶೈವ ಕವಿಗಳು ಕವಿಸಮಯವೆಂದು ತಮ್ಮ ಕಾವ್ಯಗಳಲ್ಲಿ

ಶೃಂಗಾರ ರಸವನ್ನು ಸೇರಿಸಿದ್ದರೂ ಅಂತರಂಗದಲ್ಲಿ ನಡೆದ ತುಮುಲಗಳ ವರ್ಣನೆ ಮಾಡಿದ್ದನ್ನು ಕಾಣಬಹುದು. ಕನ್ನಡದ ಸತ್ವ, ಸ್ವತ್ವ ಅಂಥಕಾವ್ಯಗಳಲ್ಲಿ ಮಾತ್ರ ವ್ಯಕ್ತವಾಗಿರುವದರಿಂದ ಅಂಥ ಸತ್ವಯುತ ಸಾಹಿತ್ಯನಿರ್ಮಾಣವಾಗುತ್ತಿಲ್ಲವೆಂದೇ ಬಹುಭಾಗ ಭೂಸಾ ಸಾಹಿತ್ಯ ಅಥವಾ ನಮ್ಮಲ್ಲಿದ ಭೌತಿಕವಾದೀ (ಮಟೀರಿಯಲಿಸ್ಟ) ಒಲವಿನ ಸಾಹಿತ್ಯವೆಂದು ನಾನು ವಿವರಿಸಿದ್ದೇನೆ. ಕನ್ನಡವೇ ಆದರೂ ಅರ್ಥಮಾಡುವದಕ್ಕೆ ಮಹತ್ವಕೊಡುವ ವೈದಿಕರ ವಿಧಿನಿಯಮ ಸಿದ್ಧಾಂತದಂತೆ ಸಮಯ ಸಂದರ್ಭಗಳನ್ನು ಕಡೆಗಣಿಸಿ ಶರಣರ "ಬಾರದು ಬಪ್ಪದು, ಬಪ್ಪುದು ತಪ್ಪದು" ಎಂಬುದಕ್ಕೆ ಅರ್ಥಹಚ್ಚಿದರೆ ಶರಣರು ಕರ್ಮವಾದ ಒಪ್ಪಲಿಲ್ಲವೆಂಬುದಕ್ಕೆ ಮಹಾಪುರಾಣವನ್ನೆ ಬರೆಯಬೇಕಾದೀತು.

ನಮ್ಮ ಸಂಸ್ಕೃತಿಯು ನಮ್ಮ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ವ್ಯಕ್ತವಾಗುತ್ತಿರುತ್ತದೆ. ಅಂಥ ನಮ್ಮ ಸಂಸ್ಥೆಗಳ ಚಟುವಟಿಕೆಗಳನ್ನು ಕಂಡಾಗ ಅವು ನಮ್ಮ ಸಂಸ್ಕೃತಿ ಹೀನತೆಯನ್ನೇ ವ್ಯಕ್ತಪಡಿಸುತ್ತಿರುವದನ್ನು ಕಂಡು ಅದನ್ನು ಹೋಗಲಾಡಿಸುವದಕ್ಕಾಗಿ ನನಗೆ ಹೊಳೆದದ್ದನ್ನು ಸೂಚ್ಯವಾಗಿ ನನ್ನ ಲೇಖನದಲ್ಲಿ ಹೇಳಿದ್ದೇನೆ. ಶಿವಶರಣರು ಶುದ್ಧ ಸಂಸ್ಕೃತಿಯ ಬಗ್ಗೆ ಅನುಭವಕ್ಕೆ ಬರುವಂಥದನ್ನು ಹೇಳಿರುವದರಿಂದ, ಅದು ಇಂದು ಮಲಿನವಾಗಿದ್ದರೂ, ವಿಕೃತವೂ ಆಗಿದ್ದರೂ ಅದರ ಒಳಗಿನ ಒಳ ತಿರುಳು ಬೂದಿಮುಚ್ಚಿದ ಕೆಂಡದಂತಿರುವದರಿಂದ, ಅದರ ಚಿಂತನೆಯಲ್ಲಿ ನಾನು ಕಂಡುಕೊಂಡದನ್ನು ಬರೆಯುತ್ತಿದ್ದೇನೆ. ವೈದಿಕ ಸಂಸ್ಕೃತಿಯ ಕಾಲ ೧೨ ನೇ ಶತಮಾನಕ್ಕೆ ಬಸವಣ್ಣ ಜನಿವಾರ ಹರಿದಂದೇ ತೀರಿದೆ. ವೀರಶೈವ ಸಂಸ್ಕೃತಿ ಪೂರ್ಣ ರೂಪಗೊಳ್ಳದೆ ಅರ್ಧಕ್ಕೆ ಉಳಿದಿದೆ. ಅದು ಇಂದಿನ ಸಾಂಸ್ಕೃತಿಕ ಕ್ರಾಂತಿಯ ಮೂಲಕ ರೂಪುಗೊಳ್ಳಬೇಕಾಗಿದೆ. ಅದಕ್ಕಾಗಿ ಶ್ರಮಿಸಬೇಕೆನ್ನುವವರು ಸಂಸ್ಕೃತಿಯ ಸಮಗ್ರ ದೃಷ್ಟಿಹೊಂದಿರಬೇಕೆಂಬುದೇ ನನ್ನ ಹಂಬಲ.

ಇನ್ನು ಶ್ರೀ ಮಹಿಷಿಯವರು ನನ್ನ ಬರಹಗಳಲ್ಲಿ ಇಲ್ಲದ ಮಾತನ್ನು ಎಳೆದು ಅರ್ಥಹಚ್ಚುವ ಮೂಲಕ ಬ್ರಾಹ್ಮಣರ ಮೇಲೆ ಹಿಂಸಾಪ್ರಯೋಗವೆಲ್ಲಿ ಆಗುತ್ತದೋ ಎಂಬ ಭೀತಿ ನನ್ನಲ್ಲಿ ಮೂಡಿದೆ ಎಂದು ಹೇಳಿದ್ದಕ್ಕೆ ನನ್ನ ಉತ್ತರವಿಷ್ಟೆ! ವೈದಿಕ ಪ್ರಜ್ಞೆಯ ಮಹಿಷಿಯಂತಹರನ್ನೂ ಕೆಲವರು ಇದೇ ಭೀತಿಯನ್ನು ನನ್ನೆ

ದುರು ವ್ಯಕ್ತಮಾಡಿದ್ದುಂಟು. ಆದರೆ ವೀರಶೈವ ತತ್ವಜ್ಞಾನವು, ವೈದಿಕತತ್ವಜ್ಞಾನದಂತೆ ಫ್ಯಾಸಿಸ್ಟ ತತ್ವಜ್ಞಾನವಲ್ಲವೆಂಬುದನ್ನವರು ತಿಳಿದಿಲ್ಲ. ಫ್ಯಾಸಿಸ್ಟ ಹಿಟ್ಲರನು ಜ್ಯೂಗಳನ್ನು ತಲೆಹೊಡೆದದ್ದು ಅವರಿಗೆ ನೆನಪಿದೆ. ಆದರೆ ಅವರದು ವ್ಯರ್ಥ ಭೀತಿ ಎಂಬದನ್ನು ನನ್ನ ಅನುಭವದಿಂದ ಕಂಡುಕೊಂಡಿದ್ದೇನೆ. ಬ್ರಾಹ್ಮಣರು ಬೌದ್ಧಿಕ ಶ್ರಮಕ್ಕೆ ದೈಹಿಕ ಶ್ರಮಕ್ಕಿಂತ ಹೆಚ್ಚಿನ ಗೌರವ, ಬೆಲೆ ತಂದುಕೊಟ್ಟದ್ದರಿಂದ, ಅದನ್ನೇ ಅನುಕರಿಸಿ ಬೌದ್ಧಿಕ ಶ್ರಮದ ಕ್ಷೇತ್ರದಲ್ಲಿಯೂ ತಮಗಿರುವ ಸಂಖ್ಯಾಬಲದಿಂದ ಲಿಂಗಾಯತರು ಬ್ರಾಹ್ಮಣರನ್ನು ಪೈಪೋಟಿಯಲ್ಲಿ ಸೋಲಿಸಿದ್ದಾರೆ. ಅದು ತಲೆಹೊಡೆದಂತಲ್ಲ. ಲೋಕಸತ್ತೆಯಲ್ಲಿ ಬುದ್ಧಿಬಲ, ಬಾಹುಬಲಗಳಂತೆ ಸಂಖ್ಯಾಬಲವೂ ಒಂದು ಬಲವೇ ಆಗಿದೆ.

ವೀರಶೈವರಾಗಿ ಹುಟ್ಟಿದ್ದರಿಂದ ಯಾವದೇ ಸ್ವರೂಪದಲ್ಲಾಗಲೀ ವೀರಶೈವ ತತ್ವಜ್ಞಾನವನ್ನು ಅನುಷ್ಠಾನದಲ್ಲಿಟ್ಟುಕೊಂಡುಬಂದಿದ್ದ ಲಿಂಗಾಯತರಲ್ಲಿ ತಲೆ ಹೊಡೆಯುವ ವಿಚಾರಕ್ಕಿಂತ, ತಮ್ಮ ತಲೆ ಕೊಟ್ಟಾದರೂ ತತ್ವಪಾಲಿಸುವ ಎದೆಗಾರಿಕೆ ಇದೆ ಎಂಬದನ್ನು ಶ್ರೀ ನಿಜಲಿಂಗಪ್ಪನವರ ವ್ಯಕ್ತಿತ್ವದಿಂದ ತಿಳಿಯಬಹುದು. ಹಾರುವನನ್ನು ನಂಬಿದ ಕಾರಣ ಯಾರ‍್ಯಾರ ತಲೆಹೋಯಿತೆಂಬದನ್ನು ಬಸವಣ್ಣನವರ ವಚನದಲ್ಲಿ ಬಿತ್ತರಿಸಿದ್ದನ್ನು ತಿಳಿದೂ ನಿಜಲಿಂಗಪ್ಪನವರು ರಾಜಾಜಿಯಂತಹ ಕರಿಯ ಹಾರುವನನ್ನು (ಕನ್ನಡ, ಕರ್ನಾಟಕದ ವಿಷಯವಾಗಿ ರಾಜಾಜಿಗಿದ್ದ ದುರ್ಭಾವನೆಯನ್ನು ತಿಳಿದವರು ಅವರಿಗೆ ಕೊಳಕು ಹಾರುವ ಎನ್ನುವದನ್ನು ನಾನು ಕೇಳಿದ್ದೇನೆ.) ನಂಬಿದ ಕಾರಣ ರಾಜಕೀಯದಲ್ಲಿ ಅವರು ತಲೆಮರೆಯಿಸಿಕೊಂಡಿರಬೇಕಾಗಿದೆ ಎಂಬುದು ವಸ್ತುಸ್ಥಿತಿ. ಲಿಂಗಾಯತರು ಹಾರುವರಂತೆ ಕಾಯಕದಿಂದ ಕೈಲಾಸವೆಂದು ತಿಳಿಯುವದನ್ನು ಬಿಟ್ಟು, ವೀರಶೈವರಂತೆ ಕಾಯಕವೇ ಕೈಲಾಸವೆಂದು ತಿಳಿದ ದಿನ ಅವರದೂ ಉದ್ಧಾರವಾಗುತ್ತದೆ. ಕರ್ನಾಟಕದ್ದೂ ಉದ್ಧಾರವಾಗುತ್ತದೆ.

ಕರ್ನಾಟಕದಲ್ಲಿ ಹುಟ್ಟಿಬೆಳೆದ ನನಗೆ ಕರ್ನಾಟಕದ ಉದ್ಧಾರದಲ್ಲಿ, ಕರ್ನಾಟಕದ ಅಭ್ಯುದಯದಲ್ಲಿ ಆಸ್ಥೆ ಇರುವದರಿಂದ ಯಾವ ತತ್ವಜ್ಞಾನದ ಹಿನ್ನೆಲೆಯಲ್ಲಿ ನಮ್ಮ ಸಮಾಜ ವ್ಯವಸ್ಥೆ ರೂಪಗೊಳ್ಳುವದು ಒಳ್ಳೆಯದೆಂದು ನನ್ನ ಅನುಭವಕ್ಕೆ ಬಂದಿದೆಯೋ ಅದನ್ನು ಬರಹದಲ್ಲಿ ತಿಳಿಸುತ್ತೇನೆ. ಅದನ್ನು

ಮೆಚ್ಚಿಕೊಂಡವರು ನನ್ನ ಬೆನ್ನು ಚಪ್ಪರಿಸುತ್ತಿರಬಹುದು. ಆದರೆ ಬೆನ್ನು ಚಪ್ಪರಿಸಿಕೊಳ್ಳಬೇಕೆಂಬದೇ ನನ್ನ ಉದ್ದೇಶವಲ್ಲ. ಈ ಸ್ಪಷ್ಟೀಕರಣ ಓದಿದ ಮೇಲಾದರೂ ಶ್ರೀ ಮಹಿಷಿಯವರಂತಹರು ವ್ಯರ್ಥ ಕಂಠಶೋಷಣೆ ಮಾಡಿ ಕೊಳ್ಳುವದನ್ನು ಬಿಡುವದರೊಂದಿಗೆ, ಲೇಖನಿಯ ಅಪವ್ಯಯವನ್ನೂ ನಿಲ್ಲಿಸುವ ರೆಂದು ನಾನು ಆಶಿಸುತ್ತೇನೆ. ಶೂದ್ರ ಪ್ರಜ್ಞೆಯವರು ವೈದಿಕ ಪ್ರಜ್ಞೆಯವರ ತಲೆ ಹೊಡೆಯಬಹುದೆಂಬ ಕಾಲ್ಪನಿಕ ಭೀತಿಯನ್ನೂ ತೊರೆದು ಈ ನಾಡಿನಲ್ಲಿ ಶುದ್ಧ ಸಂಸ್ಕೃತಿಯು ರೂಪಗೊಳ್ಳುವದಕ್ಕೆ ಶ್ರಮಿಸುವ ಸದ್ಬುದ್ಧಿ ಎಲ್ಲರಲ್ಲಿ ಬರಬೇಕೆಂದು ಬಯಸುತ್ತೇನೆ. ಸಬಕೋ ಸನ್ಮತಿ ದೇ ಭಗವಾನ್.

■ ■ ■

ಶಶಿಧರ ಕುಲಕರ್ಣಿ

ನನ್ನ ಅಥೆನಾಗಳು

ಏಜಾಕ್ಸನಿಗೆ ಸಿಕ್ಕ
ಕುರಿಗಳ ಹಾಗೆ
ಕತ್ತರಿಸಿ ಬಿಡಲೇ ಅಥವ
ಮುಂದಿಯುನ ಕುಟ್ಟಣಿಯಲ್ಲಿ
ಕುಟ್ಟಿ ಮಾಡಿದ ಪಲ್ಪ್‌ನಲ್ಲಿ
ನನ್ನ ಅದೆಷ್ಟೋ ಅಥೆನಾಗಳ
ಪ್ರತಿಮೆ ಮಾಡಿ ಊರ ಚೌಕಗಳಲ್ಲಿ ನಿಲಿಸಿ
'ಯಾರನ್ನು ಶ್ರದ್ಧೆಯಿಂದ ಭಜಿಸುವಿಯೋ
ಅವರಲ್ಲಿ ಭಕ್ತಿ ಮೂಡುವಂತೆ ಮಾಡುತ್ತೇನೆ'
ಎಂದು ಕೊಟೇಶನ್ ಬರೆದು ನಕ್ಕುಬಿಡಲೇ
ಅನಿಸುತ್ತದೆ

ಈ ಭ್ರೂಣ
ಗರ್ಭದಲ್ಲಿಯೇ ಗೋರಿ ಕಂಡಾಗ
ಅವರೆಲ್ಲರೂ ಬದುಕಿ ಬಿಡುತ್ತಾರೆ–
ಬಿಂಬಗಳ ಹಾಗೆ,
ಜಂತು ಹುಳಗಳ ಹಾಗೆ,
ನಾಯಿ ಕೊಡೆಗಳ ಹಾಗೆ,

ಶ್ರೀ– ಗಂಧದ ಮರಗಳ ಹಾಗೆ.

ನಾನು–
ಬೇಲಿಗೆ ಕಳ್ಳಿಯಾಗಿಯೇ ಉಳಿದುಬಿಡುತ್ತೇನೆ.

CREATIVE AND CRITICAL
WRITINGS IN KANNADA

•

SANKRAMANA

ಸಂಕ್ರಮಣ

•

ರಚನಾತ್ಮಕ ಹಾಗೂ ವಿಮರ್ಶಾ
ಲೇಖನಗಳು